ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ನನ್ನ ಭವಿಷ್ಯ ನಿರ್ಧರಿಸುವುದು ಬಿಸಿಸಿಐಗೆ ಬಿಟ್ಟ ವಿಚಾರ, ಭಾರತ ಕ್ರಿಕೆಟ್ ತಂಡದ ಕೋಚ್ ಗೌತಮ್ ಗಂಭೀರ್...

27 ನವೆಂಬರ್ 2025 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 256 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಬದುಕು ನೀಡುವ ಬದಲಿ ಜೋಡಣೆ » 2

ನಿಶಾ ಮುಕ್ತ ಭಾರತ ನಿರ್ಮಾಣಕ್ಕೆ ಜಾಗೃತಿ ಮೂಡಿಸಿ » 3

ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್‌ಗೆ ಕೇಂದ್ರದ ಒಲವು » 4

ಕಾಂಗ್ರೆಸ್ ಹೈಕಮಾಂಡ್‌ಗೆ ನಾಯಕತ್ವ ಇಕ್ಕಟ್ಟು

- ಪ್ರಜೋದಯ ವರದಿ

ನವದೆಹಲಿ: ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಪಟ್ಟಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಅಧಿಕಾರ ಹಂಚಿಕೆ ಸಂಘರ್ಷ ನಿಬಾಯಿಸುವುದು ಕಾಂಗ್ರೆಸ್ ಹೈಕಮಾಂಡ್‌ಗೆ ಸವಾಲಾಗಿ ಪರಿಣಮಿಸಿದೆ.

ವಿವಾದವನ್ನು ಶೀಘ್ರದಲ್ಲೇ ಇತ್ಯರ್ಥಪಡಿಸಲಾಗುವುದು. ಈ ಸಂಬಂಧ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ನಾನು ಸಮಾಲೋಚನೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳುತ್ತೇವೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಪ್ರತಿಕ್ರಿಯಿಸಿದ್ದಾರೆ.

ಡಿ.ಕೆ.ಶಿ.ಗೆ ರಾಹುಲ್ ಸಂದೇಶ

ಡಿ.1 ರಂದು ಸಂಸತ್ ಚಳಿಗಾಲದ ಅಧಿವೇಶನ ಪ್ರಾರಂಭವಾಗುವ ಮೊದಲು ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳಲು ವರಿಷ್ಠರು ನಿರ್ಧರಿಸಿದ್ದಾರೆ. ಏತನ್ಮಧ್ಯೆ, ರಾಹುಲ್ ಗಾಂಧಿ ಅವರು, ಡಿ.ಕೆ.ಶಿವಕುಮಾರ್‌ಗೆ ಸಂಕ್ಷಿಪ್ತ ವಾಟ್ಸಾಪ್ ಸಂದೇಶದ ಮೂಲಕ ಪ್ರತಿಕ್ರಿಯಿಸಿದ್ದು, ದಯವಿಟ್ಟು ಕಾಯಿರಿ. ನಾನು ನಿಮಗೆ ಕರೆ ಮಾಡುತ್ತೇನೆ ಎಂದಿದ್ದಾರೆಂದು ತಿಳಿದುಬಂದಿದೆ.

ಸಿದ್ದರಾಮಯ್ಯ ನಡೆಗೆ ಹೈಕಮಾಂಡ್ ಬೇಸರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ್ದ ನಾನೇ 5 ವರ್ಷ ಮುಂದುವರಿಯುತ್ತೇನೆ ಹಾಗು ಎರಡು ಬಜೆಟ್ ಮಂಡಿಸುತ್ತೇನೆಂಬ ಹೇಳಿಕೆಗೆ ಹೈಕಮಾಂಡ್ ನಾಯಕರು ಬೇಸರಗೊಂಡಿದ್ದಾರೆ ಎಂಬ ಮಾಹಿತಿಯೂ ಇದೆ. ಇಂತಹ ಹೇಳಿಕೆಯಿಂದ ಮತ್ತಷ್ಟು ಗೊಂದಲ ಸೃಷ್ಟಿಯಾಲಿದೆ ಎಂಬ ಆತಂಕವನ್ನು ಹೈಕಮಾಂಡ್ ನಾಯಕರು ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

- **ರಾಹುಲ್-ಸೋನಿಯಾ ಸಮ್ಮುಖದಲ್ಲಿ ಸಮಸ್ಯೆ ಇತ್ಯರ್ಥ: ಮಲ್ಲಿಕಾರ್ಜುನ ಖರ್ಗೆ**
- **ನ. 29ಕ್ಕೆ ಡಿ.ಕೆ.ಶಿ. ದೆಹಲಿಗೆ | ಸತೀಶ್ ಜಾರಕಿಹೊಳಿ ಜೊತೆ ರಹಸ್ಯ ಸಭೆ**

ಡಿ.ಕೆ.ಶಿವಕುಮಾರ್ ಅವರು ಅಧಿಕಾರ ಹಂಚಿಕೆಗೆ ಸಂಬಂಧಿಸಿ ನಮ್ಮಲ್ಲಿ ಐದು ಅಥವಾ 6 ಜನರ ನಡುವೆ ರಹಸ್ಯ ಒಪ್ಪಂದ ನಡೆದಿದೆ ಎಂದು ಹೇಳುವ ಮೂಲಕ ಊಹಾಪೋಹಗಳಿಗೆ ಮತ್ತಷ್ಟು ಪುಷ್ಟಿ ನೀಡಿದ್ದರು. ರಾಜ್ಯದ ರಾಜಕೀಯ ಬೆಳವ ಣಿಗೆ ಹಾಗು ಸ್ಥಿತಿಗತಿ ಚರ್ಚೆ ಮಾಡುವ ಉದ್ದೇಶದಿಂದ ರಾಹುಲ್ ಗಾಂಧಿ ಅವರ ಬಳಿ ಭೇಟಿಗೆ ಸಮಯಾವಕಾಶ ಕೋರಿದ್ದರು. ನ. 29 ರಂದು ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳಲಿದ್ದಾರೆಂಬ ಮಾಹಿತಿ ಇದೆ.

ಜಾರಕಿಹೊಳಿ-ಡಿ.ಕೆ.ಶಿ. ಸಭೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುವುದೇ ವೇದ ವಾಕ್ಯ, ಹೈಕಮಾಂಡ್ ನಿರ್ಧಾರವೇ ಅಂತಿಮ, ನಾನು ಮುಖ್ಯಮಂತ್ರಿ ಆಕಾಂಕ್ಷಿಯಲ್ಲವೆಂದು ಹೇಳುತ್ತಲೇ ಡಿ.ಕೆ.ಶಿವಕುಮಾರ್ ರಹಸ್ಯ ಕಾರ್ಯಾಚರಣೆ ಮೂಲಕ ಮುಖ್ಯಮಂತ್ರಿ ಪಟ್ಟಕ್ಕಾಗಿ ದಾಳ ಉರುಳಿಸುತ್ತಿದ್ದಾರೆ. ನಿರಂತರ ಟೆಂಪಲ್ ರನ್ ಜೊತೆಗೆ ಶಾಸಕರು, ಸಚಿವರ ವಿಶ್ವಾಸ ಪಡೆಯುವ ಪ್ರಯತ್ನ ಮುಂದುವರಿಸಿದ್ದಾರೆ. ಸಿದ್ದರಾಮಯ್ಯ ಅವರ ಆಪ್ತ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರೊಂದಿಗೆ ಒಂದು ಗಂಟೆಗೂ ಹೆಚ್ಚು ಕಾಲ ಮಾತುಕತೆ ನಡೆಸಿದ್ದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಮುಂದಿನ ಎರಡೂವರೆ ವರ್ಷದ ರೂಟ್ ಮ್ಯಾಪ್ ಸಿದ್ಧಪಡಿಸಲು ಸೇರಿದ್ದೆವು. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವುದು ಬೇಡವೆಂದು ಶಿವಕುಮಾರ್ ಹೇಳಿದ್ದಾರೆಯಾದರೂ ತಮಗೆ ಬೆಂಬಲಿಸುವಂತೆ ಕೋರಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಒಪ್ಪದೆ ಸಿದ್ದರಾಮಯ್ಯ ನಿಷ್ಠೆ ಪ್ರದರ್ಶಿ ಸಿದ್ದಾರೆಂದು ಮೂಲಗಳಿಂದ ತಿಳಿದುಬಂದಿದೆ.

ಡಿ.ಕೆ.ಶಿವಕುಮಾರ್ ಜೊತೆಗಿನ ಮಾತುಕತೆ ನಂತರ ಸಚಿವ ಸತೀಶ್ ಜಾರಕಿಹೊಳಿ ಆಪ್ತ ಶಾಸಕರ ಜೊತೆ ಡಿನ್ನರ್ ಮೀಟಿಂಗ್ ಮಾಡಿದ್ದಾರೆ. ಶಾಸಕರಾದ ಹಂಪನಗೌಡ ನಾಯಕ್, ಕಂಪ್ಲಿ ಗಣೇಶ್, ಬಾಬಾ ಸಾಹೇಬ್ ಪಾಟೀಲ್, ಆಸಿಫ್ ಪಠಾಣ್, ವಿಶ್ವಾಸ್ ವೈದ್ಯ, ಪ್ರಕಾಶ್ ಕೋಳಿವಾಡ, ಪಾವಗಡ ವೆಂಕಟೇಶ್ ಇದ್ದರು.

> ಪಕ್ಷದಲ್ಲಿ ಯಾವ ಗೊಂದಲ ಅಥವಾ ಬಣಗಳಿಲ್ಲ. ನಾವು ಯಾವ ಬೇಡಿಕೆ ಇಡಬಾರದು. ಪಕ್ಷದಲ್ಲಿ ಪ್ರತ್ಯೇಕ ಗುಂಪುಗಳಿಲ್ಲ. ಒಂದೇ ಒಂದು ಗುಂಪು ಇದ್ದು ಅದು ಕಾಂಗ್ರೆಸ್. ಅದರಲ್ಲಿ 140 ಶಾಸಕರಿದ್ದಾರೆ. ಈ ವಿಚಾರದಲ್ಲಿ ವಿರೋಧ ಪಕ್ಷ ಬಿಜೆಪಿ ಅನಗತ್ಯ ಗೊಂದಲ ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಆಡಳಿತ ಪಕ್ಷ ಅವರಿಗೆ ಅವಕಾಶ ಮಾಡಿಕೊಡಬಾರದು.
> -ಡಿ.ಕೆ.ಶಿವಕುಮಾರ್, ಡಿಸಿಎಂ

ಡಿ.ಕೆ.ಶಿವಕುಮಾರ್ ಭೇಟಿಯ ಬಗ್ಗೆ ಮಾಧ್ಯಮಗಳ ಜೊತೆ ಮಾತನಾಡಿದ ಜಾರಕಿಹೊಳಿ, ಶಿವಕುಮಾರ್ ಎಲ್ಲಾ ಸಚಿವರನ್ನು, ಶಾಸಕರನ್ನ ಭೇಟಿಯಾಗಿದ್ದಾರೆ. ನನಗಿರುವ ಮಾಹಿತಿ ಪ್ರಕಾರ ನಾನೇ ಕೊನೆಯವನು ಇರಬೇಕು. ಸಾಕಷ್ಟು ಬಾರಿ ಅವರು ಭೇಟಿಯಾಗಿದ್ದಾರೆ. ಡಿ.ಕೆ.ಸುರೇಶ್ ಹಿಂದೆ ಭೇಟಿಯಾಗಿದ್ದರು. ನಾವು ಅವರ ಮನೆಗೆ ಹೋಗಿ ಬಂದಿದ್ದೇವೆ. ಮೊದಲ ದಿನದಿಂದ ಮುಖ್ಯಮಂತ್ರಿ ಸ್ಥಾನದ ಆಸೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ಅಂದು ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿಯಾಗಿ ಹೈಕಮಾಂಡ್ ಘೋಷಿಸಿತ್ತು. ಹೈಕಮಾಂಡ್ ತೀರ್ಮಾನ ಮಾಡಬೇಕು ಎಂದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು: ನಿರ್ಮಲಾನಂದ ಶ್ರೀ

- ಪ್ರಜೋದಯ ವರದಿ



ಚನ್ನರಾಯಪಟ್ಟಣ: ಮುಂದಿನ ಎರಡೂವರೆ ವರ್ಷಕ್ಕೆ ರಾಜ್ಯದ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರನ್ನು ಪರಿಗಣಿಸಬೇಕೆಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಪ್ರತಿಪಾದಿಸಿದರು.

ತಾಲ್ಲೂಕಿನ ಕುಂದೂರು ಮಠದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ರಾಜಕಾರಣದಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ನೋಡುತ್ತಿದ್ದೇನೆ. ಒಕ್ಕಲಿಗ ಸಮುದಾಯದ ಭಕ್ತರು, ಮುಖಂಡರು ಡಿ.ಕೆ.ಶಿವಕುಮಾರ್ ಅವರಿಗೆ ಪ್ರಾಮುಖ್ಯತೆ ನೀಡಬೇಕೆಂದು ಹೇಳುತ್ತಿದ್ದಾರೆ. ನಮ್ಮ ಸಮುದಾಯದ ನಾಯಕ ಮುಖ್ಯಮಂತ್ರಿ ಆಗಲಿ ಎನ್ನುವುದು ಭಕ್ತರ ಭಾವನೆ. ಸಮುದಾಯ ರಾಜ್ಯವನ್ನಾಳಲು ಹಲವು ನಾಯಕರನ್ನು ನೀಡಿದೆ. ನಮ್ಮವರೇ ಮುಖ್ಯಮಂತ್ರಿಯಾಗುತ್ತಾರೆಂದು 2023ರ ಚುನಾವಣೆಯಲ್ಲಿ ಮತ ನೀಡಿ ಗೆಲ್ಲಿಸಿದ್ದೆವು. ಬದಲಾದ ಸನ್ನಿವೇಶದಲ್ಲಿ ಅವಕಾಶ ಕೈತಪ್ಪಿತು ಎಂದರು.

ಕಾಂಗ್ರೆಸ್ ಹೈ ಕಮಾಂಡ್ ಇದನ್ನೆಲ್ಲ ಪರಿಗಣಿಸಿ ಶಿವಕುಮಾರ್ ಅವರಿಗೆ ಅವಕಾಶ ನೀಡಬೇಕು. ಶಿವಕುಮಾರ್ ಪಕ್ಷಕ್ಕಾಗಿ ಶಿಸ್ತಿನಿಂದ ದುಡಿದಿದ್ದಾರೆ. ಯಾವ ಸಂದರ್ಭದಲ್ಲೂ ಪಕ್ಷ ನಿಷ್ಠೆ ಮರೆತಿಲ್ಲ. ಎಷ್ಟೋ ನೋವು ಎದುರಾದರೂ ಏಕಾಂಗಿಯಾಗಿ ಹೋರಾಡಿದವರು. ಆದಷ್ಟು ಬೇಗ ಅವರು ಮುಖ್ಯಮಂತ್ರಿಯಾಗ ಬೇಕೆನ್ನುವುದು ಮಠದ ಭಕ್ತರ ಅಪೇಕ್ಷೆ ಎಂದರು.

ಡಿ.ಕೆ.ಶಿ. ಏಕಾಂಗಿಯಲ್ಲ

ಶಿವಕುಮಾರ್ ಅವರು ಹುಟ್ಟು ಹೋರಾಟಗಾರ. ಯಾವ ಸಂದರ್ಭ ದಲ್ಲಿ ಏನು ಮಾಡಬೇಕೆಂಬುದು ಅವರಿಗೆ ಗೊತ್ತಿದೆ. ರಾಷ್ಟ್ರಾದ್ಯಂತ ಹೋರಾಟ ಮಾಡಿರುವ ಅವರಿಗೆ ರಾಜಕೀಯ ಒಳಸುಳಿ ಗೊತ್ತಿರುತ್ತದೆ. ಹಲವು ದಿನಗಳಿಂದ ರಾಜ್ಯ ರಾಜಕಾರಣ ಭಿನ್ನ ದಿಕ್ಕಿನಲ್ಲಿ ಸಾಗುತ್ತಿದೆ. ರಾಜಕೀಯ ಸ್ಥಿರತೆ ಇಲ್ಲದಿದ್ದರೆ ಅಭಿವೃದ್ಧಿ ಮೇಲೆ ಪರಿಣಾಮ ಬೀರುತ್ತದೆಂದರು.

ಪಕ್ಷದ ಮೇಲಿನ ಪ್ರೀತಿಯಿಂದ ಅತ್ಯಂತ ಮುತುವರ್ಜಿ ಹಾಗು ಪ್ರೀತಿಯಿಂದ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಆದಷ್ಟು ಬೇಗ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಕೈಗೊಳ್ಳಬೇಕೆಂದು ಶ್ರೀಗಳು ಕಿವಿಮಾತು ಹೇಳಿದರು.

ಲಂಚ ಸ್ವೀಕಾರ: ಲೋಕಾ ಬಲೆಗೆ ಬಿದ್ದ ಎಸಿಎಫ್ ಸತೀಶ್

ಚಾರ್ಜ್‌ಶೀಟ್ ಸಲ್ಲಿಸಲು ಲಂಚ : ತಡರಾತ್ರಿ ಹೈ ಡ್ರಾಮಾ

- ಪ್ರಜೋದಯ ವರದಿ

ಹಾಸನ: ಅರಣ್ಯ ನಿಯಮ ಉಲ್ಲಂಘನೆ ಆರೋಪದಡಿ ದಾಖಲಾಗಿದ್ದ ಪ್ರಕರಣದಲ್ಲಿ ಬಚಾವು ಮಾಡುತ್ತೇನೆಂದು ಜ್ಯೋತಿಷಿ ಯೊಬ್ಬರಿಂದ ಲಂಚ ಸ್ವೀಕರಿಸಿದ್ದ ಅರಣ್ಯ ಸಂಚಾರಿ ದಳದ ಎಸಿಎಫ್ ಒಬ್ಬರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ರಾತ್ರಿ ಬಂಧಿಸಿದ್ದಾರೆ.

ಅರಕಲಗೂಡು ತಾಲ್ಲೂಕು ಕೆಬ್ಬಳಿಗೆರೆ ಗ್ರಾಮದ ಸತೀಶ್ ಬಂಧಿತ ಆರೋಪಿ. ಹಾಸನ ಸಂಚಾರಿ ದಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸತೀಶ್‌ನನ್ನು ನಗರ ಹೊರವಲಯದ ಗೆಂಡೆಕಟ್ಟೆ ಉದ್ಯಾನವನದ ಗೆಸ್ಟ್ ಹೌಸ್‌ನಿಂದ ಮಧ್ಯರಾತ್ರಿ 3 ಗಂಟೆಗೆ ವಶಕ್ಕೆ ಪಡೆಯಲಾಗಿದೆ. ಮಧ್ಯರಾತ್ರಿ ಕಾರ್ಯಾಚರಣೆಯಾದ್ದರಿಂದ ಸತೀಶ್ ಅವರ ಅಪಹರಣವಾಗಿದೆ ಎಂದು ಭಾವಿಸಿ ಬಡಾವಣೆ ಠಾಣೆ ಪೊಲೀಸರು ಹುಡುಕಾಟ ನಡೆಸಿ ಸತ್ಯಾಂಶ ಗೊತ್ತಾದ ಬಳಿಕ ಬೆನ್ತು ಬಿದ್ದಿದ್ದಾರೆ.

ಗೂಗಲ್ ಪೇ ಮೂಲಕ ಲಂಚ

ಪ್ರಕರಣವೊಂದರಲ್ಲಿ ಶೀಘ್ರ ಚಾರ್ಜ್‌ಶೀಟ್ ಸಲ್ಲಿಕೆ ಹಾಗು ತಮ್ಮನ್ನು ನಿರ್ದೋಷಿಯಾಗಿಸುತ್ತೇನೆಂದು ಅರಸೀಕೆರೆ ತಾಲ್ಲೂಕು ಯಾದಾಪುರದ ಜ್ಯೋತಿಷಿ ಎಂ. ಅಖಿಲೇಶ್ ಅವರಿಂದ 15 ಸಾವಿರ ರೂ. ಲಂಚ ಪಡೆದಿದ್ದರು. ನ.19 ರಂದು ಫೋನ್ ಪೇ ಮೂಲಕ ಹಣ ಸಂದಾಯ ಮಾಡಿದ್ದ ಅಖಿಲೇಶ್ ಪುನಃ ಮಂಗಳವಾರ ಗೂಗಲ್ ಪೇ ಮೂಲಕ 10 ಸಾವಿರ ರೂ. ವರ್ಗಾವಣೆ ಮಾಡಿದ್ದರು. ಮೊದಲೇ ದೂರು ದಾಖಲಿಸಿಕೊಂಡಿದ್ದ ಲೋಕಾಯುಕ್ತ ಪೊಲೀಸರು, ಖಚಿತ ಮಾಹಿತಿ ಮೇರೆಗೆ ಗೆಂಡೆಕಟ್ಟೆ ಉದ್ಯಾನವನಕ್ಕೆ ತೆರಳಿ ಗಾಢ ನಿದ್ರೆಯಲ್ಲಿದ್ದ ಸತೀಶ್‌ನನ್ನು ಸುಪರ್ದಿಗೆ ಪಡೆದಿದ್ದಾರೆ. ವಿಚಾರಣೆ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅಧಿಕಾರಿಗಾಗಿ ಪೊಲೀಸರ ಹುಡುಕಾಟ

ಎಸಿಎಫ್ ಸತೀಶ್‌ನನ್ನು ಲೋಕಾ ಯುಕ್ತ ಪೊಲೀಸರು ಐಬಿಯಿಂದ ಕರೆದೊಯ್ದ ನಂತರ, ಸ್ಥಳದಲ್ಲಿದ್ದ ಅರಣ್ಯ ಸಿಬ್ಬಂದಿಗೆ ಇದು ಅಪರಿಚಿತರಿಂದ ಅಪಹರಣವಾದಂತೆ ತೋರಿದ ಕಾರಣ ಗೊಂದಲ ಉಂಟಾಯಿತು.

ಸ್ಥಳದಲ್ಲಿದ್ದ ಫಾರೆಸ್ಟ್ ಗಾರ್ಡ್‌ಗಳು ಅಪರಿಚಿತರು ನಮ್ಮ ಅಧಿಕಾರಿಯನ್ನು ಕರೆದೊಯ್ದಿದ್ದಾರೆಂದು ಆರ್‌ಎಫ್‌ಓ ವಿಶ್ವನಾಥ್ ಅವರಿಗೆ ಮಾಹಿತಿ ನೀಡಿದರು. ಹಲವು ಬಾರಿ ಸತೀಶ್‌ಗೆ ಕರೆ ಮಾಡಿದರೂ ಫೋನ್ ಕರೆ ಸ್ವೀಕರಿಸದ ಕಾರಣ ಗಾಬರಿ ಹೆಚ್ಚಿತು. ಬಡಾವಣೆ ಪೊಲೀಸ್ ಠಾಣೆಗೆ ಸುದ್ದಿ ನೀಡಲಾ ಯಿತು. ಪೊಲೀಸರು ಕೂಡ ಸ್ಥಳಕ್ಕೆ ಬಂದು ಶೋಧ ಕಾರ್ಯ ನಡೆಸಿದರು.

ಫೋನ್ ಟವರ್ ಲೊಕೇಷನ್ ಆಧರಿಸಿ ಪೊಲೀಸರು ಹುಡುಕಾಟ ಮುಂದುವರಿಸಿದರು. ಲೊಕೇಷನ್ ಜಿಲ್ಲಾಧಿಕಾರಿ ಕಚೇರಿ ಪ್ರದೇಶವನ್ನು ತೋರಿಸಿದೆ. ಬಳಿಕ ಡಿಸಿ ಕಚೇರಿ ಮೊದಲ ಮಹಡಿಯಲ್ಲಿರುವ ಲೋಕಾಯುಕ್ತ ಠಾಣೆಯಲ್ಲೇ ಸತೀಶ್ ಇರುವುದು ಪೊಲೀಸರಿಗೆ ಗೊತ್ತಾಗಿ ಪೊಲೀಸರು ಹಿಂತಿರುಗಿದರು.

ಮಕ್ಕಳಿಗೆ ಸಂವಿಧಾನ ಪೀಠಿಕೆ ಓದಿಸಿ : ಶ್ರೇಯಸ್ ಪಟೇಲ್

- ಪ್ರಜೋದಯ ವರದಿ

ಹಾಸನ : ಸಂವಿಧಾನ ಪುಸ್ತಕ ಅತ್ಯದ್ಭುತವಾದ ಗ್ರಂಥ. ಅದಕ್ಕೆ ಸಮಾನವಾದ ಗ್ರಂಥ ಮತ್ತೊಂದಿಲ್ಲ. ಹಾಗಾಗಿ ಶಾಲೆಗಳಲ್ಲಿ ಮಕ್ಕಳಿಗೆ ಪ್ರತಿದಿನ ಸಂವಿಧಾನದ ಕುರಿತು ಒಂದು ಪುಟವನ್ನಾದರೂ ಓದಿಸಿ ಅದರ ಮಹತ್ವದ ಕುರಿತು ವಿವರಿಸಬೇಕೆಂದು ಸಂಸದ ಶ್ರೇಯಸ್ ಎಂ .ಪಟೇಲ್ ಅವರು ತಿಳಿಸಿದ್ದಾರೆ.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬುಧವಾರ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವೆಲ್ಲರೂ ತಂದೆ-ತಾಯಿ, ಗುರು-ಹಿರಿಯರಿಗೆ ಕೊಡುವ ಗೌರವವನ್ನು ಸಂವಿಧಾನದ ಪೀಠಿಕೆ ಹಾಗೂ ಸಂವಿಧಾನ ಪುಸ್ತಕಕ್ಕೂ ಕೊಡಬೇಕು. ಸಂವಿಧಾನದ ಪೀಠಿಕೆಯನ್ನು ಬಾಯಿಪಾಠ ಮಾಡಿಕೊಳ್ಳಬೇಕು. ದೈನಂದಿನ ದಿನಚರಿಯಲ್ಲಿ ಆಹಾರ ಎಷ್ಟು ಅಗತ್ಯವೋ, ಹಾಗೆಯೇ ನಮ್ಮ ಸಂವಿಧಾನವು ನಮಗೆ ಅಷ್ಟೇ ಅಗತ್ಯವೆಂದರು.

ಸಂವಿಧಾನವನ್ನು ನಾವೆಲ್ಲರೂ ಓದುವುದಷ್ಟೇ ಅಲ್ಲದೆ, ನಮ್ಮ ಪೋಷಕರಿಗೆ ಹಾಗೂ ಮುಂದಿನ ಪೀಳಿಗೆಗೆ ಸಂವಿಧಾನದ ಕುರಿತು ತಿಳಿಹೇಳುವುದರ ಮೂಲಕ ಸಮಾಜವನ್ನು ಕಟ್ಟುವ ಕೆಲಸ ಮಾಡುವುದು ಇಂದಿನ ಮಕ್ಕಳ ಜವಾಬ್ದಾರಿ. ಸಂವಿಧಾನದ ತತ್ವಗಳನ್ನು ನಾವುಗಳು ಅಳವಡಿಸಿಕೊಳ್ಳುವುದರ ಮೂಲಕ ಸಂವಿಧಾನವನ್ನು ರಕ್ಷಣೆ ಮಾಡಬೇಕು ಎಂದರು.

ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಮಾತನಾಡಿ, ನಮ್ಮ ದೇಶವು ಮೊದಲು ಪರಕೀಯರ ಆಳ್ವಿಕೆಯಲ್ಲಿತ್ತು. ತದ ನಂತರ 1947 ರಲ್ಲಿ ಅವರಿಂದ ಮುಕ್ತಿಯನ್ನು ಹೊಂದಲಾಯಿತು. ಆದರೆ ನಮ್ಮ ಸಂವಿಧಾನವನ್ನು ಸ್ವಾತಂತ್ರ್ಯ ಬರುವುದಕ್ಕಿಂತ ಮೊದಲೇ 1946 ರಲ್ಲಿಯೇ ಸಂವಿಧಾನ ರಚಿಸಲು ಪ್ರಾರಂಭಿಸಲಾಯಿತು. ತದ ನಂತರ 1949 ನವೆಂಬರ್ 26 ರಂದು ಸಂವಿಧಾನವನ್ನು ಅಂಗೀಕರಿಸಿಕೊಂಡೆವು ಎಂದು ತಿಳಿಸಿದರು.

ನಮ್ಮ ದೇಶವು 560 ಕ್ಕಿಂತ ಹೆಚ್ಚಿನ ಭಾಗಗಳಾಗಿ ವಿಂಗಡಣೆಯಾಗಿತ್ತು, ಅವುಗಳನ್ನು ಒಗ್ಗೂಡಿಸಿ ಭೌತಿಕವಾಗಿ ಒಂದು ದೇಶವನ್ನು ರಚಿಸಿ ಭಾರತ ಎಂದು ಗುರುತು ಕೊಡಲಾಯಿತು. ನಮ್ಮ ದೇಶದ ಜೀವಾಳ ಸಂವಿಧಾನವಾಗಿದೆ. ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಯಾವಾಗಲೂ ಜೊತೆ ಜೊತೆಯಾಗಿಯೇ ಇರುತ್ತವೆ. ಅವುಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಹಾಗಾಗಿ ನಮ್ಮ ಸಂವಿಧಾನದ ಕುರಿತು ನಾವುಗಳು ತಿಳಿದುಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ನಮ್ಮ ಸಂವಿಧಾನವು ಅನೇಕ ವಿಶೇಷತೆಗಳಿಂದ ಕೂಡಿದೆ ನಾವು ಯಾವ ರೀತಿ ಇರಬೇಕು, ಯಾವ ರೀತಿ ಜೀವನ ಮಾಡಬೇಕೆಂಬ ಎಲ್ಲಾ ಅಂಶಗಳನ್ನು ತಿಳಿಸುತ್ತದೆ. ಜೊತೆಗೆ ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬುದನ್ನು ತಿಳಿಸುತ್ತದೆ. ವೈವಿಧ್ಯಮಯವಾದ ದೇಶ ನಮ್ಮದು ಆ ವೈವಿಧ್ಯತೆಯೆ ನಮ್ಮ ಗುರುತಾಗಿದೆ. ಪ್ರತಿಯೊಬ್ಬರೂ ಸಂವಿಧಾನವನ್ನು ಓದಬೇಕು ಜೊತೆಗೆ ಆ ಸಂವಿಧಾನದ ಚೌಕಟ್ಟಿನಲ್ಲಿ ಬದುಕಬೇಕು. ನಮ್ಮ ದೇಶಕ್ಕೆ, ಸಂವಿಧಾನಕ್ಕೆ ನಾವು ಮೊದಲ ಆದ್ಯತೆ ಕೊಡಬೇಕು. ಅವುಗಳಲ್ಲಿರುವ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಭಾವನೆಗಳನ್ನು ನಾವೆಲ್ಲರೂ ಅನುಸರಿಸಬೇಕೆಂದು ತಿಳಿಸಿದರು.

ಇಂದು ನಾವು ಸ್ವತಂತ್ರರಾಗಿದ್ದೇವೆಂದರೆ ಅದು ಸ್ವಾತಂತ್ರ್ಯ ಹೋರಾಟಗಾರರ, ಸಂವಿಧಾನ ರಚನಕಾರರ, ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರ

ಬದುಕು ನೀಡುವ ಬದಲಿ ಜೋಡಣೆ

ಹೃದಯ, ಶ್ವಾಸಕೋಶ, ಯಕೃತ್ತು, ಮೂತ್ರಪಿಂಡ, ಮಾಂಸಲಿ (ಪ್ಯಾನ್ ಕ್ರಿಯಾಸ್) ಮತ್ತು ಕರುಳು. ಎರಡನೆಯ ವರ್ಗದಲ್ಲಿ ಯಶಸ್ವಿಯಾಗಿರುವ ಆದರೆ ಅಪರೂಪಕ್ಕೆ ನಡೆಸುವ ಬದಲಿ ಜೋಡಣೆಗಳು- ಗರ್ಭಕೋಶ, ಜಠರ ಮತ್ತು ಥೈಮಸ್ ಗ್ರಂಥಿ. ಮೂರನೆಯ ವರ್ಗದಲ್ಲಿ ಸಂಯುಕ್ತ ಅಂಗಗಳನ್ನು (ಒಂದಕ್ಕಿಂತ ಹೆಚ್ಚು ಅಂಗಗಳನ್ನು) ಬದಲಿ ಜೋಡಿಸುವುದುಂಟು- ಕೈ ಅಥವಾ ಬಾಹು, ಮುಖ, ಶಿಶ್ನ, ಧ್ವನಿ ಪೆಟ್ಟಿಗೆ ಹಾಗೂ ವಾಯುನಾಳ (ಟ್ರೇಕಿಯ).

ಒಂದಿರುಗಿ ನೋಡಿದಾಗ

ಬದುಕು ನೀಡುವ ಬದಲಿ ಜೋಡಣೆ ಈ ಮಾತಿನಲ್ಲಿ ಯಾವುದೇ ಉತ್ಪ್ರೇಕ್ಷೆಯಿಲ್ಲ. ಇಂದು ನಾವು ಒಬ್ಬ ಮನುಷ್ಯನ ಅಂಗವನ್ನು ಹೊರ ತೆಗೆದು, ಅದನ್ನು ಮತ್ತೊಬ್ಬ ಮನುಷ್ಯನಿಗೆ ಬದಲಿ ಜೋಡಿಸುವುದು ಸಾಧ್ಯವಾಗಿವೆ. ಹೀಗೆ ಜೋಡಿಸಬಹುದಾದ ಅಂಗಗಳನ್ನು ನಾಲ್ಕು ರೀತಿ ವರ್ಗೀಕರಿಸಬಹುದು. ಮೊದಲನೆಯ ಪ್ರಧಾನ ಜೀವಾದಾಯಕ ಷಷ್ಟಾಂಗಗಳು.

ಹೃದಯ, ಶ್ವಾಸಕೋಶ, ಯಕೃತ್ತು, ಮೂತ್ರಪಿಂಡ, ಮಾಂಸಲಿ (ಪ್ಯಾನ್‌ಕ್ರಿಯಾಸ್) ಮತ್ತು ಕರುಳು. ಎರಡನೆಯ ವರ್ಗದಲ್ಲಿ ಯಶಸ್ವಿಯಾಗಿರುವ ಆದರೆ ಅಪರೂಪಕ್ಕೆ ನಡೆಸುವ ಬದಲಿಜೋಡಣೆಗಳು- ಗರ್ಭಕೋಶ, ಜಠರ ಮತ್ತು ಥೈಮಸ್ ಗ್ರಂಥಿ. ಮೂರನೆಯ ವರ್ಗದಲ್ಲಿ ಸಂಯುಕ್ತ ಅಂಗಗಳನ್ನು (ಒಂದಕ್ಕಿಂತ ಹೆಚ್ಚು ಅಂಗಗಳನ್ನು) ಬದಲಿ ಜೋಡಿಸುವುದುಂಟು- ಕೈ ಅಥವಾ ಬಾಹು, ಮುಖ, ಶಿಶ್ನ, ಧ್ವನಿಪೆಟ್ಟಿಗೆ ಹಾಗೂ ವಾಯುನಾಳ (ಟ್ರೇಕಿಯ). ನಾಲ್ಕನೆಯ ವರ್ಗದಲ್ಲಿ ಇಡೀ ಅಂಗವನ್ನು ಬದಲಿಜೋಡಿಸುವ ಬದಲು, ಆ ಅಂಗದ ಕೆಲವು ಭಾಗಗಳನ್ನು ಮಾತ್ರ ಕಸಿಯಲ್ಲಿ ಬಳಸುವುದುಂಟು.

ಕಣ್ಣಿನ ಕಾರ್ನಿಯ, ಚರ್ಮ, ಹೃದಯ ಕವಾಟ, ಅಸ್ಥಿಮಜ್ಜೆ, ಧಮನಿ ಮತ್ತು ಸಿರೆಗಳು. ಮನುಷ್ಯನ ತಲೆಯನ್ನು ಬದಲಿ ಜೋಡಿಸಿದ ದಿನ, ಅವನು ಭಗವಂತನೇ ಆಗಿ ಬಿಡುತ್ತಾನೆ. ಆದರೆ ಆ ದಿನ ಸದ್ಯಕ್ಕೆ ಕಾಣುತ್ತಿಲ್ಲ.

ಮನುಷ್ಯನ ದೇಹದ ಮೊತ್ತ ಮೊದಲ ಯಶಸ್ವಿ ಕಸಿಯೆಂದರೆ ಕಣ್ಣಿನ ಪಾರಪಟಲ ಇಲ್ಲವೇ ಕಾರ್ನಿಯ ಕಸಿ. ಈ ಪ್ರಯೋಗವು ಮೊದಲ ಬಾರಿಗೆ 1905ರಲ್ಲಿ ಯಶಸ್ವಿಯಾಯಿತು. ಆದರೆ ಇತರ ಅಂಗಗಳ ಬದಲಿ ಜೋಡಣೆ ಯಶಸ್ವಿಯಾಗಲಿಲ್ಲ. ಹಾಗೆಂದು ವಿಜ್ಞಾನಿಗಳು ತಮ್ಮ ಪ್ರಯತ್ನವನ್ನು ಬಿಡಲಿಲ್ಲ.

ವೈದ್ಯರು, ಸಂಶೋಧಕರು ಹಾಗೂ ರೋಗಿಗಳ ನಿರಂತರ ಪ್ರಯತ್ನ ಹಾಗೂ ತ್ಯಾಗದಿಂದ ಮನುಕುಲವು ಎರಡು ಮಹಾನ್ ಬದಲಿ ಅಂಗಜೋಡಣೆಯ ಯಶಸ್ಸನ್ನು ಕಂಡಿತು. ಮೊದಲನೆಯದು 1954ರಲ್ಲಿ ಯಶಸ್ವಿಯಾದ ಮೂತ್ರಪಿಂಡ ಬದಲಿಜೋಡಣೆ ಹಾಗೂ 1967ರಲ್ಲಿ ಯಶಸ್ವಿಯಾದ ಹೃದಯ ಬದಲಿ ಜೋಡಣೆಯ ಶಸ್ತ್ರಚಿಕಿತ್ಸೆ. ಈ ಯಶಸ್ಸಿನ ಗಾಥೆ ರಾಜ ಮಾರ್ಗವಾಗಿರಲಿಲ್ಲ. ವಿಜ್ಞಾನಿಗಳು ಹಲವು ಪ್ರಮುಖ ಅಡ್ಡಿ ಆತಂಕಗಳನ್ನು ಎದುರಿಸಬೇಕಾಯಿತು.

ಇವೆಲ್ಲವನ್ನು ಸಮರ್ಥವಾಗಿ ಎದುರಿಸಿದರು ವಿಜ್ಞಾನಿಗಳು. ಇಂದು ಜಗತ್ತಿನಲ್ಲಿ ಪ್ರತಿವರ್ಷ ಸುಮಾರು 150000 ಯಶಸ್ವಿ ಬದಲಿ ಹೃದಯ ಶಸ್ತ್ರಚಿಕಿತ್ಸೆಗಳು ನಡೆಯುತ್ತಿವೆ ಎಂದರೆ ಈ ಯಶಸ್ಸಿನ ಶಿಖರವನ್ನು ಕಲ್ಪಿಸಿಕೊಳ್ಳಬಹುದು. ವಿಜ್ಞಾನಿಗಳು ಎದುರಿಸಿದ ಮುಖ್ಯವಾದ ಕೆಲವು ಅಡೆತಡೆಗಳನ್ನು ಹಾಗೂ ಅವುಗಳನ್ನು ವಿಜ್ಞಾನಿಗಳು ಹೇಗೆ ಎದುರಿಸಿದರು ಎನ್ನುವುದನ್ನು ಸ್ಥೂಲವಾಗಿ ಗಮನಿಸೋಣ.

ಎಂಬ್ರಾಯ್ಡರಿ: ವಿಜ್ಞಾನಿಗಳು ಎದುರಿಸಿದ ಮೊದಲ ಸಮಸ್ಯೆ ಎಂದರೆ, ದಾನಿಯ ಹೃದಯವನ್ನು ಗ್ರಾಹಿಗೆ ಜೋಡಿಸಬೇಕಾದರೆ, ರಕ್ತನಾಳಗಳನ್ನು ನಿಖರವಾಗಿ ಜೋಡಿಸುವುದು. ಕ್ರಿ. ಶ.1900ರ ಅವಧಿಯಲ್ಲಿ ಒಂದು ರಕ್ತನಾಳವನ್ನು ಮತ್ತೊಂದು ರಕ್ತನಾಳಕ್ಕೆ ಹೇಗೆ ಹೊಲಿಯ ಬೇಕೆಂದು ಶಸ್ತ್ರವೈದ್ಯರಿಗೆ ತಿಳಿದಿರಲಿಲ್ಲ. ಅವರು ಹಲವು ರೀತಿಯಲ್ಲಿ ಹೊಲಿಗೆ ಹಾಕಿದರೂ, ರಕ್ತನಾಳಗಳ ಒಳಗೆ ರಕ್ತವು ಗರಣೆಕಟ್ಟಿಕೊಂಡು ರಕ್ತ ಸಂಚಾರವು ಸ್ಥಗಿತ ವಾಗುತ್ತಿತ್ತು.

ಮಾಡಿದ ಎಲ್ಲ ಪ್ರಯತ್ನಗಳು ನಿರರ್ಥಕವಾಗುತ್ತಿದ್ದವು. ಅಲೆಕ್ಸಿಸ್ ಕ್ಯಾರೆಲ್ (1873-1944) ಎಂಬ ಫ್ರೆಂಚ್ ಶಸ್ತ್ರವೈದ್ಯನಿದ್ದ. ಇವನು ಸಹ ರಕ್ತನಾಳಗಳನ್ನು ಹೇಗೆ ಹೊಲಿಯಬೇಕು ಎಂದು ಯೋಚಿಸುತ್ತಿದ್ದ. ಒಂದು ದಿನ ಅವನು ತನ್ನ ಅಮ್ಮ ಹಾಕುತ್ತಿದ್ದ ಕಸೂತಿಯನ್ನು ಗಮನಿಸಿದ. ಕೂಡಲೇ ಆ ಕಸೂತಿಯನ್ನು ಅಮ್ಮನಿಂದ ಪೂರ್ಣ ಹೇಳಿಸಿಕೊಂಡ.

ತಾನೂ ಕಸೂತಿಯನ್ನು ಹಾಕಿ ತೋರಿಸಿದ. ಅಮ್ಮನಿಂದ ಶಹಭಾಶ್‌ಗಿರಿ ಪಡೆದ. ಅಮ್ಮನಿಂದ ಕಲಿತ ತಂತ್ರವನ್ನೇ ಉಪಯೋಗಿಸಿಕೊಂಡು ಎರಡು ರಕ್ತನಾಳಗಳನ್ನು ಹೊಲಿದ. ಎರಡು ರಕ್ತನಾಳಗಳು ಆರೋಗ್ಯವಾಗಿದ್ದವು. ರಕ್ತವು ಹರಿಯುತ್ತಿತ್ತು, ಗರಣೆ ಕಟ್ಟಲಿಲ್ಲ.

ಇದನ್ನು ಟ್ರಯಾಂಗ್ಯುಲೇಶನ್ ಸ್ಯೂಚರಿಂಗ್ ಮೆಥಡ್ ಎಂದು ಕರೆಯುತ್ತಾರೆ. ಇವನನ್ನು ಬದಲಿ ಜೋಡಣಾ ಶಸ್ತ್ರಚಿಕಿತ್ಸೆಯ ಪಿತಾಮಹ (ಫಾದರ್ ಆಫ್ ಟ್ರಾನ್ಸ್‌ಪ್ಲಾಂಟೇಶನ್ ಸರ್ಜರಿ) ಎಂದು ಕರೆದರು. ಅಲೆಕ್ಸಿಸ್ ಕ್ಯಾರೆಲ್ ಅಮ್ಮನಿಂದ ಕಲಿತು ರೂಪಿಸಿದ ಈ ಹೊಲಿಗೆಯ ತಂತ್ರಜ್ಞಾನಕ್ಕಾಗಿ 1912ರ ನೊಬೆಲ್ ಪಾರಿತೋಷಕವನ್ನು ಪಡೆದ. ಇಂದು ನಡೆಯುತ್ತಿರುವ ಎಲ್ಲ ರೀತಿಯ ಬದಲಿ ಜೋಡಣಾ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗುತ್ತಿರುವುದಕ್ಕೆ ಕಾರಣ ಕ್ಯಾರೆಲ್ ರೂಪಿಸಿದ ಹೊಲಿಗೆಯ ವಿಧಾನ.

ಮಿಲಿಟರಿ ಪಡೆ: ರಕ್ತನಾಳಗಳನ್ನು ಬದಲಿಜೋಡಿಸುವ ಯಶಸ್ವಿ ತಂತ್ರವನ್ನು ರೂಪಿಸಿದ ಮಾತ್ರಕ್ಕೆ ಬದಲಿ ಜೋಡಣಾ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗಲಿಲ್ಲ. ವಿಜ್ಞಾನಿಗಳು ಮತ್ತೊಂದು ಸಮಸ್ಯೆಯನ್ನು ಎದುರಿಸಿದರು. ಅದುವೇ ಮಾನವ ದೇಹದ ಮಿಲಿಟರಿ ಪಡೆಯ ರೋಧಕತ್ವ. ನಮ್ಮ ದೇಶವನ್ನು ರಕ್ಷಿಸಲು ಒಂದು ಸೈನ್ಯವಿರುವಂತೆ, ನಮ್ಮ ದೇಹವನ್ನು ರಕ್ಷಿಸಲೂ ಒಂದು ಸೇನೆಯಿರುತ್ತದೆ. ಅದುವೇ ಪ್ರಧಾನವಾಗಿ ಬಿಳಿಯ ರಕ್ತಕಣಗಳಿಂದ ಆಗಿರುವ ರೋಗರಕ್ಷಣಾ ವ್ಯವಸ್ಥೆ ಅಥವಾ ಇಮ್ಯೂನ್ ಸಿಸ್ಟಮ್.

ನಮ್ಮ ದೇಶದ ಪ್ರತಿಯೊಬ್ಬರಿಗೂ ಅವರ ಗುರುತು-ಪರಿಚಯವನ್ನು ತಿಳಿಸುವ ಒಂದು ಆಧಾರ್ ಕಾರ್ಡ್ ಇರುವ ಹಾಗೆ, ನಮ್ಮ ದೇಹದ ಪ್ರತಿಯೊಂದು ಜೀವಕೋಶಕ್ಕೂ ಅದರ ಗುರುತು ಪರಿಚಯವನ್ನು ತಿಳಿಸುವ ಒಂದು ಆಧಾರ್ ಕಾರ್ಡ್ ಇರುತ್ತದೆ.

ಅದುವೇ ಎಚ್‌ಎಲ್‌ಎ ವ್ಯವಸ್ಥೆ (ಹ್ಯೂಮನ್ ಲ್ಯೂಕೋಸೈಟ್ ಆಂಟಿಜೆನ್ ಸಿಸ್ಟಮ್). ಬಿಳಿಯ ರಕ್ತಕಣಗಳಲ್ಲಿ ಕೆಲವು ಸದಾ ದೇಹಾದ್ಯಂತ ಗಸ್ತು ಹೊಡೆಯುತ್ತಿರುತ್ತವೆ. ದಾರಿಯಲ್ಲಿ ಸಿಕ್ಕ ಎಲ್ಲ ಜೀವಕೋಶ/ಕಣ/ರಾಸಾಯನಿಕಗಳು ಆಧಾರ್ ಕಾರ್ಡನ್ನು ಪರೀಕ್ಷಿಸುತ್ತವೆ. ಆಧಾರ್ ಸರಿಯಾಗಿದ್ದರೆ ಮುಂದೆ ಹೋಗಲು ಬಿಡುತ್ತವೆ.

ತಪ್ಪಾಗಿದ್ದರೆ ಆ ಅಗಂತುಕನನ್ನು ಶತ್ರುವೆಂದು ಪರಿಗಣಿಸಿ, ಅಲ್ಲಿಯೇ ಅದನ್ನು ನಿರ್ನಾಮ ಮಾಡುತ್ತವೆ. ಒಂದು ಅಂಗವನ್ನು ಬದಲಿ ಜೋಡಿಸಿದಾಗ, ಅವನ ಅಂಗದಲ್ಲಿರುವ ಜೀವ ಕೋಶಗಳ ಆಧಾರ್ ಕಾರ್ಡ್ ಭಿನ್ನವಾಗಿರುತ್ತದೆ. ಹಾಗಾಗಿ ಬಿಳಿಯ ರಕ್ತಗಳ ದಂಡು ನೋಡ ನೋಡುತ್ತಿರುವಂತೆ ಬದಲಿ ಅಂಗವನ್ನು ನಾಶಪಡಿಸುತ್ತವೆ. ಇದನ್ನು ಕಸಿ ತಿರಸ್ಕಾರ (ಗ್ರಾಫ್ ರಿಜೆಕ್ಷನ್) ಎನ್ನುತ್ತಾರೆ.

1933ರಲ್ಲಿ ಸೋವಿಯತ್ ದೇಶದ ಯುಯು ವೋರೋನೋಯ್ (1895-1961) ಎಂಬ ಶಸ್ತ್ರವೈದ್ಯನು ಜಗತ್ತಿನ ಮೊದಲ ಮೂತ್ರಪಿಂಡ ಬದಲಿ ಜೋಡಣೆಯ ಶಸ್ತ್ರಚಿಕಿತ್ಸೆಯನ್ನು ನಡೆಸಿದ. ಮೃತ ದೇಹದಿಂದ ಮೂತ್ರಪಿಂಡವನ್ನು ಛೇದಿಸಿದ. ಪಾದರಸ ವಿಷದಿಂದ ನರಳುತ್ತಿದ್ದ ಓರ್ವ ಮಹಿಳೆಗೆ ಈ ಮೂತ್ರಪಿಂಡವನ್ನು ಯಶಸ್ವಿಯಾಗಿ ಬದಲಿ ಜೋಡಿಸಿದ. ಅವನು ನೋಡನೋಡುತ್ತಿರುವಂತೆಯೇ ಆಕೆಯ ದೇಹದ ಮಿಲಿಟರಿ ಪಡೆಯು ಬದಲಿ ಜೋಡಿಸಿದ ಮೂತ್ರಪಿಂಡದ ಮೇಲೆ ಆಕ್ರಮಣವನ್ನು ಮಾಡಿತು. ಬದಲಿ ಜೋಡಿಸಿದ ಮೂತ್ರಪಿಂಡ ಕಪ್ಪಾಯಿತು. ಒಡಲಿನಿಂದ ಪ್ರತ್ಯೇಕವಾಯಿತು.

ಪ್ರತಿಯೊಂದು ನಿಯಮಕ್ಕೂ ಒಂದು ವಿನಾಯತಿ ಇರುತ್ತದೆಯಂತೆ. ಎಷ್ಟೇ ಸಮಗ್ರವಾಗಿ ರೂಪಿಸಿದ ಯೋಜನೆಯಲ್ಲೂ ಎಲ್ಲೋ ಒಂದು ಕಡೆ ಒಂದು ಲೋಪವಿರುತ್ತದೆಯಂತೆ. ಮಿಲಿಟರಿ ಪಡೆಯ ಕಾರ್ಯಕ್ಷಮತೆಯಲ್ಲೂ ಒಂದು ಲೋಪವಿತ್ತು. ಈ ಲೋಪವನ್ನು ಗಮನಿಸಿದ ಅಮೆರಿಕದ ಬಾಸ್ಟನ್ನಿನ ಪೀಟರ್ ಬ್ರೈಂಟ್ ಬ್ರಿಘಾಮ್ ಆಸ್ಪತ್ರೆಯ (ಬ್ರಿಘಾಮ್ ಮತ್ತು ಮಹಿಳೆಯರ ಆಸ್ಪತ್ರೆ) ಡಾ.ಜೋಸೆಫ್ ಮುರ್ರೆ (1919-2012) ಎಂಬ ಶಸ್ತ್ರವೈದ್ಯನು ಮೂತ್ರಪಿಂಡ ವೈಫಲ್ಯದ ಬಗ್ಗೆ ಅಧ್ಯಯನವನ್ನು ಮಾಡುತ್ತಿದ್ದ. ಅವನಿಗೆ ಮಿಲಿಟರಿ ಪಡೆಯ ಕಾರ್ಯಸಾಮರ್ಥ್ಯದ ಪರಿಚಯವು ಚೆನ್ನಾಗಿಯೇ ಇತ್ತು.

1954. 23 ವರ್ಷದ ರಿಚರ್ಡ್ ಹೆರ್ರಿಕ್. ತೀವ್ರಸ್ವರೂಪದ ಮೂತ್ರಪಿಂಡ ಉರಿಯೂತದ ಕಾರಣ ಸಾವಿನಂಚಿಗೆ ಬಂದಿದ್ದ. ಇವನಿಗೆ ಒಬ್ಬ ಅವಳಿ ಸೋದರ. ರೊನಾಲ್ಡ್ ಹೆರ್ರಿಕ್. ಅವನು ತನ್ನ ಮೂತ್ರಪಿಂಡವೊಂದನ್ನು ದಾನವಾಗಿ ನೀಡಲು ಒಪ್ಪಿದ. ಇವರಿಬ್ಬರೂ ಅವಳಿ ಮಕ್ಕಳು. ಅವರ ಡಿಎನ್‌ಎ ಸ್ವರೂಪವು ಏಕರೂಪವಾಗಿತ್ತು.

ಹಾಗಾಗಿ ಅವರಿಬ್ಬರ ದೇಹದ ಅಂಗಾಂಗಗಳ ಆಧಾರ್ ಕಾರ್ಡ್ ಏಕರೂಪವಾಗಿತ್ತು. ಹಾಗಾಗಿ ರೊನಾಲ್ಡ್ ನೀಡುವ ಮೂತ್ರಪಿಂಡವನ್ನು ಪರಕೀಯ ಎಂದು ಭಾವಿಸಿ, ಅದನ್ನು ನಾಶಮಾಡುವ ಪ್ರಯತ್ನವನ್ನು ರಿಚರ್ಡ್ ಮಿಲಿಟರಿ ಪಡೆಯು ಮಾಡುವುದಿಲ್ಲ ಎನ್ನುವ ಸತ್ಯವು ಮುರ್ರೆಯವರಿಗೆ ತಿಳಿದಿತ್ತು.

ಹಾಗಾಗಿ ಬದಲಿ ಜೋಡಣೆಯನ್ನು ನಡೆಸಲು ಸಿದ್ಧರಾದರು. ಆಗ ಅನಿರೀಕ್ಷಿತ ಅವಘಡ ಎದುರಾಯಿತು. ಅಮೆರಿಕದ ಜನರು ಹಲವು ನೈತಿಕ ಪ್ರಶ್ನೆಗಳನ್ನು ಎತ್ತಿದರು. ಕೆಲವು ಕ್ರೈಸ್ತರಲ್ಲಿ ಒಬ್ಬ ಅಂಗವನ್ನು ಮತ್ತೊಬ್ಬರಿಗೆ ಬದಲಿ ಜೋಡಿಸುವುದು ನಿಷಿದ್ಧವಿತ್ತು. ಒಬ್ಬ ಮನುಷ್ಯನು ಪೂರ್ಣವಾಗಿ ಸ್ವಸ್ಥನಾಗಿದ್ದಾನೆ.

ಅವನ ಮೇಲೆ ಶಸ್ತ್ರಚಿಕಿತ್ಸೆಯನ್ನು ನಡೆಸುವುದು ಅನೈತಿಕ. ಅದು ಗಂಭೀರ ಸ್ವರೂಪದ ಶಸ್ತ್ರಚಿಕಿತ್ಸೆ. ಜೀವಾಪಾಯ ಆಗುವ ಸಾಧ್ಯತೆಯಿತ್ತು. ಅಕಸ್ಮಾತ್ ರೊನಾಲ್ಡ್ ಸತ್ತರೆ ಯಾರು ಹೊಣೆ? ಈ ಶಸ್ತ್ರಚಿಕಿತ್ಸೆಯಿಂದ ರಿಚರ್ಡ್‌ಗೆ ಅನುಕೂಲವಾಗಬಹುದು. ಆದರೆ ರೊನಾಲ್ಡ್ ಸಾಯಬಹುದಲ್ಲವೆ!

ಇಂಥ ಶಸ್ತ್ರಚಿಕಿತ್ಸೆಗೆ ಮುಂದಾಗಿರುವ ವೈದ್ಯರ ಗುಂಪನ್ನು ಬಂಚ್ ಆಫ್ ಫಾಲ್ಸ್, ಗ್ರೇವ್ ರಾಬರ್ಸ್ ಎಂದೆಲ್ಲ ಜರೆದರು. ಪೊಲೀಸರು ಅವರು ನಿಜಕ್ಕೂ ಅವಳಿ ಸೋದರರು ಎನ್ನುವುದನ್ನು ಖಚಿತಪಡಿಸಲು ಅವರ ಬೆರಳಚ್ಚನ್ನು ಪರೀಕ್ಷಿಸಿ ಖಚಿತಪಡಿಸಿಕೊಂಡರು.

ಡಿಸೆಂಬರ್ 23, 1954. ಮುರ್ರೆಯವರು ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಿ ಮುಗಿಸಿದ್ದರು. ಮುರ್ರೆಯವರು ಬದಲಿ ಮೂತ್ರಪಿಂಡದ ರಕ್ತನಾಳಕ್ಕೆ ಹಾಕಿದ್ದ ತಡೆಯನ್ನು (ಕ್ಲಾಂಪ್) ತೆಗೆಯುತ್ತಿರುವಂತೆಯೇ ರಕ್ತಪ್ರವಾಹವು ನುಗ್ಗಿತು. ಪೇಲವವಾಗಿದ್ದ ಮೂತ್ರ ಪಿಂಡವು ಕೆಂಪಗಾಯಿತು. ಕೂಡಲೇ ಮೂತ್ರೋತ್ಪಾದನೆಯನ್ನು ಆರಂಭಿಸಿತು.

ನೋಡನೋಡುತ್ತಿರುವಂತೆಯೇ ಬದಲಿ ಜೋಡಣೆಯು ಯಶಸ್ವಿಯಾಗಿತ್ತು. ನಿರೀಕ್ಷಿಸಿದ್ದಂತೆ ಮಿಲಿಟರಿ ಪಡೆಯು ಯಾವುದೇ ರೀತಿಯಲ್ಲಿ ಹೊಸ ಮೂತ್ರಪಿಂಡವನ್ನು ತಿರಸ್ಕರಿಸಲಿಲ್ಲ. ರಿಚರ್ಡ್ 8 ವರ್ಷಗಳು ಬದುಕಿದ್ದ. ತನಗೆ ಚಿಕಿತ್ಸೆಯನ್ನು ನೀಡುತ್ತಿದ್ದ ನರ್ಸ್ ಓರ್ವಳನ್ನು ಮದುವೆಯಾದ. ಎರಡು ಮಕ್ಕಳನ್ನು ಪಡೆದ.

ರೊನಾಲ್ಡ್, 79 ವರ್ಷಗಳ ಕಾಲ ಬದುಕಿದ್ದು 2010ರಲ್ಲಿ ತೀರಿಕೊಂಡ. ಜೋಸೆಫ್ ಮುರ್ರೆ ಅವರಿಗೆ ನೊಬೆಲ್ ಪಾರಿತೊಷಕವು ದೊರೆಯಿತು. ಮಿಲಿಟರಿ ಪಡೆಯನ್ನು ನಿಗ್ರಹಿಸುವ ಕಲೆಯನ್ನು ರೂಢಿಸಿಕೊಂಡರೆ, ಅಂಗಗಳ ಬದಲಿಜೋಡಣೆ ಕಷ್ಟವಲ್ಲ ಎಂದು ವಿಜ್ಞಾನಿಗಳಿಗೆ ಮನವರಿಕೆಯಾಯಿತು.

ಮೂತ್ರಪಿಂಡ ಬದಲಿಜೋಡಣೆಯು ವೈದ್ಯಕೀಯ ಲೋಕದಲ್ಲಿ ರೋಮಾಂಚನವನ್ನು ಉಂಟುಮಾಡಿದರೆ, ಹೃದಯದ ಬದಲಿ ಜೋಡಣೆಯು ಕೇವಲ ವೈದ್ಯಕೀಯ ರಂಗದಲ್ಲಿ ಮಾತ್ರವಲ್ಲ, ಇಡೀ ಸಮಾಜದಲ್ಲಿ ಅಲ್ಲೋಲಕಲ್ಲೋಲವನ್ನುಂಟು ಮಾಡಿತು. ಮಾನವ ಜನಾಂಗದಲ್ಲಿ ಹೃದಯಕ್ಕೆ ಮಹತ್ತರವಾದ ಸ್ಥಾನವಿದೆ.

ಹೃದಯವು ಭಗವಂತನ ಆವಾಸಸ್ಥಾನ, ಭಾವನೆಗಳ ಆಗರ. ಮಾನವ ಸಂಬಂಧಗಳಿಗೆ ಮಿಡುಕುವ ಅಂಗ. ಅಂದಿನ ದಿನಗಳಲ್ಲಿ ಹೃದಯವು ಮಿಡಿಯುವುದನ್ನು ನಿಲ್ಲಿಸಿದರೆ, ಅವನು ಸತ್ತ ಎಂದೇ ಪರಿಗಣಿಸುತ್ತಿದ್ದರು. ಇಂಥ ಪವಿತ್ರವಾದ ಅಂಗವನ್ನು ಮತ್ತೊಬ್ಬರಿಗೆ ಬದಲಿ ಜೋಡಿಸುವುದು ಅಪವಿತ್ರ, ಅಧಾರ್ಮಿಕ ಹಾಗೂ ಅನೈತಿಕ ಕಾರ್ಯ ಎಂದು ಸಮಾಜವು ಪ್ರತಿಭಟಿಸಿತು.

1960ರ ದಶಕ. ಸ್ಟಾನ್ ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಡಾ. ನಾರ್ಮನ್ ಶುಮ್ವೇ (1923-2006) ಹೃದಯಗಳನ್ನು ಬದಲಿ ಜೋಡಿಸುವ ಪ್ರಯೋಗಗಳನ್ನು ನಾಯಿಗಳ ಮೇಲೆ ನಡೆಸುತ್ತಿದ್ದರು. ಒಂದು ನಾಯಿಯ ಹೃದಯವನ್ನು ಎಲ್ಲಿ ಹಾಗೂ ಹೇಗೆ ಕತ್ತರಿಸಬೇಕು ಹಾಗೂ ಅದನ್ನು ಇನ್ನೊಂದು ನಾಯಿಗೆ ಹೇಗೆ ಬದಲಿ ಜೋಡಿಸಬೇಕು ಎನ್ನುವ ತಂತ್ರವನ್ನು ಕರಗತಗೊಳಿಸುತ್ತಿದ್ದರು. ಆದರೆ ಅನಿರೀಕ್ಷಿತವಾಗಿ ದಕ್ಷಿಣ ಆಫ್ರಿಕದ ಡಾ. ಕ್ರಿಶ್ಚಿಯನ್ ಬರ್ನಾರ್ಡ್ ಎನ್ನುವವನು ಜಗತ್ತಿನ ಮೊದಲ ಹೃದಯ ಬದಲಿಜೋಡಣೆಯ ಶಸ್ತ್ರಚಿಕಿತ್ಸೆ ಯನ್ನು ಯಶಸ್ವಿಯಾಗಿ ಮಾಡಿದ ಎನ್ನುವ ಸುದ್ದಿಯು ಇಡೀ ಜಗತ್ತನ್ನು ಅಲುಗಾಡಿಸಿತು.

ಮನುಷ್ಯನು ದೇವರೇ ಆಗಿಬಿಟ್ಟನೇ ಎಂದು ಕೆಲವರು ಹುಯಿಲಿಟ್ಟರು. ಕ್ರಿಶ್ಚಿಯನ್ ಬರ್ನಾರ್ಡ್ (1922-2001) ಅಮೆರಿಕದಲ್ಲಿ ಕಲಿತು ದಕ್ಷಿಣ ಆಫ್ರಿಕದಲ್ಲಿ ನೆಲೆಸಿದ್ದ. ಲೂಯಿಸ್ ವಾಷ್ಕಾನ್‌ಸ್ಕಿ (1912-1967) ಎಂಬ 53 ವರ್ಷದ ಕಿರಾಣಿ ವ್ಯಾಪಾರಿ, ಧೂಮಪಾನಿ ಹಾಗೂ ಜೂಜು ಕೋರ. ಇವನು ತನ್ನ ದೇಹದಲ್ಲಿರುವ ವಿವಿಧ ದ್ರವಗಳಲ್ಲಿ ಮುಳುಗಿ ಸಾಯುವ ಸ್ಥಿತಿಯನ್ನು ತಂದುಕೊಂಡಿದ್ದ.

ಡೆನಿಸ್ ಡರ್ವಾಲ್ 28 ವರ್ಷದ ಯುವತಿ. ಕೇಕ್ ಕೊಳ್ಳಲು ರಸ್ತೆಯನ್ನು ದಾಟುವಾಗ ಕಾರ್ ಡಿಕ್ಕಿ ಹೊಡೆಯಿತು. ಆಕೆಯ ಮಿದುಳಿಗೆ ತೀವ್ರ ಪೆಟ್ಟಾದ ಕಾರಣ ಮಿದುಳು ಮೃತವಾಯಿತು. ಆದರೆ ಹೃದಯವಿನ್ನೂ ಮಿಡಿಯುತ್ತಿತ್ತು. ಡಿಸೆಂಬರ್ 7, 1967. ದಕ್ಷಿಣ ಆಫ್ರಿಕದ ಗ್ರೂಟ್ ಶುರ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯು ಆರಂಭವಾಯಿತು. ಆದರೆ ಕಾನೂನು ಮೂಗು ತೂರಿಸಿತು. ಅಂದಿನ ದಿನಗಳಲ್ಲಿ ಹೃದಯವು ನಿಂತರೆ ಮಾತ್ರ, ಸಾವು ಸಂಭವಿಸಿದೆ ಎಂದು ಜನರು ಮಾತ್ರವಲ್ಲ ಕಾನೂನು ಸಹ ನಂಬಿತ್ತು. ಹಾಗಾಗಿ ಬರ್ನಾರ್ಡ್, ವೆಂಟಿಲೇಟರನ್ನು ಸ್ಥಗಿತಗೊಳಿಸಿದರು.

ನೋಡನೋಡುತ್ತಿರುವಂತೆಯೇ ಡರ್ವಾಲಳ ಹೃದಯವು ಮಿಡಿಯುವುದನ್ನು ನಿಲ್ಲಿಸಿತು. ತಕ್ಷಣವೇ ಹೃದಯವನ್ನು ಛೇದಿಸಿದ. ಕೂಡಲೇ ಅದನ್ನು ಆಕ್ಸಿಜನ್ ಚೇಂಬರ್‌ನ ಒಳಗಿಟ್ಟ, ಹೃದಯವು ಚೇತರಿಸಿಕೊಂಡಿತು. ನಂತರ ಅದನ್ನು ವಾಷ್ಕಾನ್‌ಸ್ಕಿಯ ಎದೆಗೂಡಿನಲ್ಲಿಟ್ಟು ಬದಲಿಜೋಡಣೆಯನ್ನು ಪೂರ್ಣಗೊಳಿಸಿದ. ವಾಷ್ಕಾನ್‌ಸ್ಕಿ, 18 ದಿನಗಳ ಕಾಲ ಬದುಕಿದ್ದ. ನಂತರ ಸತ್ತ.

ಅವನ ಸಾವಿಗೆ ಕಸಿ ತಿರಸ್ಕಾರ ಕಾರಣವಾಗಿರಲಿಲ್ಲ. ಮಿಲಿಟರಿ ಪಡೆಯನ್ನು ಸಂಪೂರ್ಣವಾಗಿ ನಿಗ್ರಹಿಸಬಲ್ಲ ಔಷಧಗಳನ್ನು ನೀಡಿದರು. ಈ ಔಷಧಗಳು ಬಿಳಿಯ ರಕ್ತಕಣಗಳ ಕಸಿ ತಿರಸ್ಕಾರ ಸಾಮರ್ಥ್ಯವನ್ನು ಕುಗ್ಗಿಸಿದ್ದವು. ಜತೆಯಲ್ಲಿ ಅವನ ಶ್ವಾಸಕೋಶಗಳಲ್ಲಿ ಬೆಳೆಯುತ್ತಿದ್ದ ಅಪಾಯಕಾರಿ ಬ್ಯಾಕ್ಟೀರಿಯಗಳನ್ನು ನಿಗ್ರಹಿಸಲೂ ವಿಫಲವಾದವು. ಹಾಗಾಗಿ ಬ್ಯಾಕ್ಟೀರಿಯಗಳ ಮೇಲುಗೈಯಾ

ನಿಶಾ ಮುಕ್ತ ಭಾರತ ನಿರ್ಮಾಣಕ್ಕೆ ಜಾಗೃತಿ ಮೂಡಿಸಿ

ಅಪರ ಜಿಲ್ಲಾಧಿಕಾರಿ ಮಂಜುನಾಥ್ ಸೂಚನೆ

• ಪ್ರಜೋದಯ ವರದಿ

ಹಾಸನ: ಮಾದಕ ವಸ್ತುಗಳ ಸೇವನೆ ನಿಯಂತ್ರಣ ಮಾಡುವುದರ ಮೂಲಕ ನಿಶಾ ಮುಕ್ತ ಭಾರತ ನಿರ್ಮಾಣಕ್ಕೆ ಜಾಗೃತಿ ಮೂಡಿಸಲು ಕ್ರಮ ವಹಿಸಿ ಎಂದು ಅಪರ ಜಿಲ್ಲಾಧಿಕಾರಿ ಮಂಜುನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ನಶಾ ಮುಕ್ತ ಭಾರತ ಅಭಿಯಾನ ಯೋಜನೆಯ ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಾಲಾ ಕಾಲೇಜು ಆವರಣದಿಂದ 200 ಮೀಟರ್ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶವಿಲ್ಲ, ಈ ನಿಯಮ ಉಲ್ಲಂಘಿಸಿದರೆ ಕ್ರಮ ವಹಿಸುವಂತೆ ಸೂಚಿಸಿದರು.

ಪ್ರತಿನಿತ್ಯ ಮಾದಕ ವಸ್ತುಗಳ ಸೇವನೆ ಮಾಡುತ್ತಾ ವ್ಯಸನಿಗಳಾಗಿರುವವರನ್ನು ಗ್ರಾಮೀಣ ಮಟ್ಟದಿಂದಲೂ ಹೆಚ್ಚಿನ ಗಮನಹರಿಸಿ ನಶಾಪೀಡಿತ ಆಯ್ದ ಪ್ರದೇಶಗಳನ್ನು ಗುರುತಿಸಿ ಹೆಚ್ಚಿನ ಅರಿವು ಮೂಡಿಸಲು ಕ್ರಮವಹಿಸಿ ಎಂದು ತಿಳಿಸಿದರು.

ಯಾವ ಉದ್ದೇಶಕ್ಕಾಗಿ ಇಂತಹ ಚಟಗಳಿಗೆ ತುತ್ತಾಗುತ್ತಿದ್ದಾರೆ ಎಂಬುದರ ಬಗ್ಗೆ ಕಾರಣ ಕಂಡುಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ವ್ಯಸನಿಗಳನ್ನು ಗುರುತಿಸಿ ಅವರಿಗೆ ಜಾಗೃತಿ ಮೂಡಿಸಿ ಮನಪರಿವರ್ತನೆಗೆ ಕ್ರಮ ವಹಿಸುವಂತೆ ತಿಳಿಸಿದರು. ಔಷಧಿ ಅಂಗಡಿಗಳ ಮಾಲೀಕರಿಗೂ ಸಹ ಅರಿವು ಕಾರ್ಯಕ್ರಮ ಆಯೋಜಿಸಲು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ದಾಕ್ಷಾಯಿಣಿ ಜಿ.ಕೆ. ಅವರು ಮಾತನಾಡಿ ಪೊಲೀಸ್ ಮತ್ತು ಆರೋಗ್ಯ ಇಲಾಖೆ ಪಾತ್ರ ಬಹು ಮುಖ್ಯವಾಗಿದೆ ಅಲ್ಲದೆ ಇತರ ಇಲಾಖೆಗಳ ಜವಾಬ್ದಾರಿ ಕೂಡ ಇದೆ. ಈ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಿ ಸಮಾಜದ ಸ್ವಾಸ್ಥವನ್ನು ಕಾಪಾಡಲು ಮುಂದಾಗಬೇಕು ಎಂದರು.

ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಹೆಚ್ಚಿನ ಕಾರ್ಯಕ್ರಮ ಆಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಕೂಡ ಹೆಚ್ಚು ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಆಗಬೇಕು. ಶಾಲಾ ಮಕ್ಕಳಿಗೆ ಚಿತ್ರಕಲೆ ಮತ್ತಿತರ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಜಾಗೃತಿ ಮೂಡಿಸಬೇಕು ಎಂದು ಅವರು ತಿಳಿಸಿದರು.

ಹಿಮ್ಸ್ ಮಾನಸಿಕ ವಿಭಾಗದ ಮುಖ್ಯಸ್ಥರಾದ ಡಾ॥ಸಂತೋಷ ಅವರು ಮಾತನಾಡಿ ಕುಡಿಯುವುದನ್ನು ಬಿಟ್ಟಿರುವವರು ಒಂದು ಸಂಘ ಮಾಡಿಕೊಂಡಿದ್ದು ಜೊತೆಗೆ ಒಂದು ಗ್ರೂಪ್ ಕೂಡ ರಚನೆ ಮಾಡಿದ್ದಾರೆ. ಅವರ ಕುಟುಂಬದ ಮಹಿಳೆಯರು ಮತ್ತು ಮಕ್ಕಳು ಕೂಡ ಪ್ರತ್ಯೇಕ ಗ್ರೂಪ್ ರಚನೆ ಮಾಡಿಕೊಂಡು ವಿಷಯಗಳ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ ಇದರಿಂದ ಏನು ಪ್ರಯೋಜನ ಆಗಿದೆ ಎಂದು ಪ್ರಶ್ನೆ ಮೂಡಬಹುದು. ಆದರೆ ಕುಟುಂಬದ ಸದಸ್ಯರೆಲ್ಲರೂ ಅನುಭವಿಸಿದ ಯಾತನೆಗಳನ್ನು ಹೇಳಿಕೊಳ್ಳುವುದರ ಜೊತೆಗೆ ಪ್ರಸ್ತುತ ದಿನಗಳಲ್ಲಿ ನೆಮ್ಮದಿ ಹಾಗೂ ಸಂತೋಷದಿಂದ ಇರುವ ಬಗ್ಗೆ ಕೂಡ ಚರ್ಚೆ ಮಾಡುತ್ತಾರೆ. ದುಶ್ಚಟಗಳ ವ್ಯಾಮೋಹ ತೊರೆದು ಹೊರಬರಲು ಇತರರಿಗೂ ಇಂತಹ ಸದಸ್ಯರಿಂದ ಪ್ರೇರಣೆ ದೊರೆಯುತ್ತದೆ ಎಂದು ಅವರು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ॥ಅನಿಲ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಗಂಗಾಧರ್, ವಿಕಲ ಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಧಿಕಾರಿಗಳಾದ ಅನುಪಮ, ಸಮಿತಿ ಸದಸ್ಯರಾದ ಸಿ.ಶಿವಸ್ವಾಮಿ, ಕೃಷ್ಣಕುಮಾರ್, ಶಬ್ಬೀರ್, ಬಿ.ಟಿ.ಮಾನವ ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಇನ್ನಿತರರು ಸಭೆಯಲ್ಲಿ ಭಾಗವಹಿಸಿದ್ದರು.

ವಿಶೇಷ ಚೇತನ ಮಕ್ಕಳಿಗೂ ಸಮಾನತೆ ಮುಖ್ಯ

ಮುಖ್ಯವಾಹಿನಿಗೆ ತರುವುದಕ್ಕೆ ಪ್ರಯತ್ನಿಸಬೇಕು: ಜಿಲ್ಲಾಧಿಕಾರಿ

• ಪ್ರಜೋದಯ ವರದಿ

ಹಾಸನ: ಪ್ರತಿಯೊಬ್ಬ ನಾಗರೀಕರು ವಿಶೇಷ ಚೇತನ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರುವುದಕ್ಕೆ ಪ್ರಯತ್ನಿಸಬೇಕು. ಅವರ ಬಗ್ಗೆ ಸಹಾನುಭೂತಿ ಅಷ್ಟೆ ಅಲ್ಲ, ಪ್ರೀತಿ, ಕರುಣೆಯ ಜೊತೆಗೆ ಅವರೂ ಕೂಡಾ ನಮ್ಮ ಹಾಗೆ ಒಬ್ಬರೂ ಎಂದು ಭಾವಿಸಿ ಸಮಾನತೆಯಿಂದ ನೋಡಬೇಕು ಎಂದು ಜಿಲ್ಲಾಧಿಕಾರಿ ಲತಾಕುಮಾರಿ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲೆಯ ಎಲ್ಲಾ ವಿಕಲಚೇತನರ ಸಂಘ ಸಂಸ್ಥೆಗಳು, ಹಾಸನ ಇವರ ಸಂಯುಕ್ತ ಆಶ್ರಯದಲ್ಲಿ ಬುಧವಾರ ಜಿಲ್ಲಾ ಕ್ರೀಡಾಂಗಣದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ-2025 ಪ್ರಯುಕ್ತ ಆಯೋಜಿಸಿದ್ದ ಜಿಲ್ಲೆಯ ವಿಕಲಚೇತನರ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ವಿಶೇಷ ಚೇತನ ಮಕ್ಕಳನ್ನು ಅವಮಾನಿಸುವುದು, ದೂರ ಇಡುವುದು, ಅಲ್ಲಗೆಳೆಯುವುದು, ಅಸಹಾಯ ತೋರಿಸುವುದನ್ನು ಮಾಡಬಾರದು ಎಂದು ತಿಳಿಸಿದರು.

ಮುಗ್ಧ ಮನಸ್ಸಿನ ವಿಶೇಷ ಚೇತನ ಮಕ್ಕಳಿಗೆ ಪ್ರಾಯೋಗಿಕವಾಗಿಯೂ ಎಲ್ಲಾ ರೀತಿಯ ಸಹಕಾರವನ್ನು ನೀಡುವುದು ಕೇವಲ ಪೋಷಕರಷ್ಟೇ ಅಲ್ಲದೆ, ಎಲ್ಲರೂ ಸಹಕಾರ ನೀಡಬೇಕು. ಇಡೀ ವ್ಯವಸ್ಥೆಯೆ ಅವರ ಪರವಾಗಿ ನಿಂತಾಗ ಅವರಿಗೆ ಒಂದು ಸಹಕಾರ ದೊರೆತಂತಾಗುತ್ತದೆ. ಅದಕ್ಕೆಲ್ಲಾ ನಾವು ಬದ್ಧರಾಗಿರೋಣ ಎಂದು ತಿಳಿಸಿದರು.

ವಿಶೇಷ ಚೇತನ ಮಕ್ಕಳನ್ನು ನೋಡಿ ಕೊಳ್ಳಲು ತಮ್ಮ ಜೀವನವನ್ನೆ ಸಂಪೂರ್ಣವಾಗಿ ಮುಡಿಪಾಗಿಟ್ಟಿರುವ ಪೋಷಕರಿಗೂ ಸರ್ಕಾರದ ಸವಲತ್ತುಗಳು ಸಿಗಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ ಕೆ.ಆರ್. ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅಂಬೇಡ್ಕರ್‌ಗೆ ಸೂಕ್ತ ಅವಕಾಶ ನೀಡದಿದ್ದುದು ಬೇಸರ ತರಿಸಿದೆ

• ಪ್ರಜೋದಯ ವರದಿ

ಅರಕಲಗೂಡು: ಭಾರತದ ಸಂವಿಧಾನ ವಿಶ್ವದಲ್ಲೆ ಅತ್ಯಂತ ಶ್ರೇಷ್ಠಮಟ್ಟದ್ದಾಗಿದೆ ಎಂದು ಶಾಸಕ ಎ.ಮಂಜು ಅವರು ತಿಳಿಸಿದರು.

ತಾಲ್ಲೂಕು ಆಡಳಿತ ವಿವಿಧ ಇಲಾಖೆಗಳ ಸಹಯೋಗದಲ್ಲಿ ಬುಧವಾರ ಏರ್ಪಡಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 2014 ರಲ್ಲಿ ಪ್ರಧಾನಿ ನರೇಂದ್ರಮೋದಿ ಸಂವಿಧಾನ ದಿನ ಆಚರಣೆ ನಿರ್ಧಾರ ಕೈಗೊಂಡ ಕಾರಣ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. ವಿದೇಶದ ಹಲವು ವಿಶ್ವ ವಿದ್ಯಾಲಯಗಳ ಪದವಿಗಳನ್ನು ಪಡೆದು ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಸಂವಿಧಾನ ರಚನಾ ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದು ಅವರು ವಿಶ್ವವೆ ಮೆಚ್ಚುವಂತಹ ಸಂವಿಧಾನವನ್ನು ಕೊಡುಗೆಯಾಗಿ ನೀಡಿದ್ದಾರೆ. ಆದರೆ ಅಂದಿನ ದಿನಗಳಲ್ಲಿ ಅಂಬೇಡ್ಕರ್ ಅವರಿಗೆ ಸೂಕ್ತ ಅವಕಾಶಗಳನ್ನು ನೀಡದಿರುವುದು ಬೇಸರದ ಸಂಗತಿಯಾಗಿದೆ. ವಿದ್ಯಾರ್ಥಿಗಳು ಅಂಬೇಡ್ಕರ್ ಅವರ ವಿಚಾರಗಳ ಕುರಿತು ಓದುವಂತೆ ತಿಳಿಸಿದರು.

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕ ಬಿ.ಪಿ. ಬಸವರಾಜ್ ಪ್ರಧಾನ ಭಾಷಣ ಮಾಡಿದರು. ತಹಶೀಲ್ದಾರ್ ಕೆ.ಸಿ. ಸೌಮ್ಯ, ಬಿಇಒ ಕೆ.ಪಿ. ನಾರಾಯಣ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸಿ.ಆರ್. ರವಿಕುಮಾರ್, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜ್, ವಿವಿಧ ಇಲಾಖೆ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಜರಿದ್ದರು. ಕಾರ್ಯಕ್ರಮಕ್ಕೆ ಮುನ್ನ ಮೆರವಣಿಗೆಯಲ್ಲಿ ಕಾರ್ಯಕ್ರಮದ ವೇದಿಕೆಗೆ ತರಳಲಾಯಿತು.

ಸಂವಿಧಾನ ಗೌರವಿಸಿ ಅರಿತು ನಡೆಯುವುದು ಎಲ್ಲರ ಕರ್ತವ್ಯ

• ಪ್ರಜೋದಯ ವರದಿ

ಹಾಸನ: ಭಾರತದ ಸಂವಿಧಾನವು 1949 ರ ನವೆಂಬರ್ 26 ರಂದು ಅಂಗೀಕೃತವಾದ ನೆನಪಿನಲ್ಲಿ ಸಂವಿಧಾನ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ನಮ್ಮ ಸಂವಿಧಾನವು ವಿಶ್ವದಲ್ಲೇ ಬೃಹತ್ ಸಂವಿಧಾನವಾಗಿದ್ದು, ಸಮೋನ್ನತ ಕಾನೂನು ಆಗಿದೆ. ಇದನ್ನು ಗೌರವಿಸಿ ಅರಿತು ನಡೆಯುವುದು ನಮ್ಮೆಲ್ಲರ ಎಲ್ಲರೂ ಕರ್ತವ್ಯವಾಗಿದೆ ಎಂದು ಹಿರಿಯ ಸಹ ಶಿಕ್ಷಕಿ ಹೆಚ್.ಪಿ.ಮಂಜುಳ ಹೇಳಿದರು.

ನಗರದ ಆರ್.ಸಿ.ರಸ್ತೆಯ ಗಂಧದ ಕೋಠಿ ಆವರಣದಲ್ಲಿರುವ ಜಿ.ಜಿ.ಜೆ.ಸಿ. ಪ್ರಧಾನ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ 76ನೇ ಸಂವಿಧಾನ ದಿನಾಚರಣೆಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಸಂವಿಧಾನದ ರಕ್ಷಣೆ ನಮ್ಮ ಹೊಣೆ ಎಂದು ಹೇಳಿದರು.

ಸಮಾಜ ವಿಜ್ಞಾನ ವಿಷಯ ಶಿಕ್ಷಕ ಕೆ.ಎನ್.ಚಿದಾನಂದ ಮಾತನಾಡಿ, ಸಂವಿಧಾನವು ದೇಶದ ಮೂಲಭೂತ ಕಾನೂನಾಗಿದೆ. ಸಂವಿಧಾನದ ಇತಿಹಾಸವನ್ನು ಮತ್ತು ಅದರ ನಿರಂತರ ಬೆಳವಣಿಗೆಯನ್ನು ಇಂದಿನ ಮಕ್ಕಳು ತಿಳಿದುಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಸಂವಿಧಾನದಲ್ಲಿರುವ ಕಾನೂನುಗಳನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು. ಇದಕ್ಕೆ ಸಂವಿಧಾನ ಓದು ಕಾರ್ಯಕ್ರಮವು ಬಹಳಷ್ಟು ಅನುಕೂಲವಾಗಿದೆ ಎಂದರು.

ನಮ್ಮ ಸಂವಿಧಾನವು 1950 ಜನವರಿ 26 ರಂದು ಅಧಿಕೃತವಾಗಿ ಜಾರಿಗೆ ಬಂದಿದ್ದು ಅಂದು 395 ವಿಧಿಗಳು, 22 ಭಾಗಗಳು ಮತ್ತು 8 ಅನುಸೂಚಿಗಳನ್ನು ಹೊಂದಿತು. ಇಂದಿನ ಕಾಲಮಾನಕ್ಕೆ ಅನುಗುಣವಾಗಿ ವಿಧಿಗಳು, ಭಾಗಗಳು ಮತ್ತು ಅನುಸೂಚಿಗಳು ಹೆಚ್ಚಿವೆ. ಹಾಗೆಯೇ ಸಂವಿಧಾನದ ಪ್ರತಿಯೊಂದೂ ಭಾಗವು ನಿರ್ದಿಷ್ಟ ವಿಷಯದ ಕುರಿತಾಗಿ ಹೇಳುತ್ತದೆ. ಪ್ರತಿಯೊಂದು ವಿಧಿಯೂ ನಿರ್ದಿಷ್ಟ ಮತ್ತು ಸ್ಪಷ್ಟ ಕಾನೂನುಗಳನ್ನು ಹೇಳುತ್ತದೆ. ಪ್ರತಿ ವರ್ಷ ನವೆಂಬರ್ 26 ಅನ್ನು ಭಾರತ ಸಂವಿಧಾನ ದಿನವಾಗಿ ಆಚರಿಸಲಾಗುತ್ತದೆ ಎಂದು ತಿಳಿಸಿದರು.

1949ರ ಇದೇ ದಿನದಲ್ಲಿ ಡಾ. ಬಿ. ಆರ್.ಅಂಬೇಡ್ಕರ್ ಅವರ ನೇತೃತ್ವದ ಸಂವಿಧಾನ ರಚನಾ ಸಮಿತಿಯು ಭಾರತದ ಸಂವಿಧಾನಕ್ಕೆ ಅಂತಿಮ ರೂಪ ನೀಡಿತು. ನಂತರ 1950ರ ಜನವರಿ 26ರಂದು ಸಂವಿಧಾನ ಜಾರಿಯಾಗಿ ಭಾರತವು ಸಂಪೂರ್ಣ ಗಣರಾಜ್ಯ ರಾಷ್ಟ್ರವಾಯಿತು. ಸಂವಿಧಾನ ದಿನದ ಆಚರಣೆಯ ಮುಖ್ಯ ಉದ್ದೇಶ ನಾಗರಿಕರಲ್ಲಿ ಸಂವಿಧಾನೀಯ ಮೌಲ್ಯಗಳು, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು, ಪ್ರಜಾಪ್ರಭುತ್ವದ ಮಹತ್ವ ಮತ್ತು ರಾಷ್ಟ್ರದ ಏಕತೆ, ಅಖಂಡತೆ ಬಗ್ಗೆ ಅರಿವು ಮೂಡಿಸುವುದು. ಡಾ. ಅಂಬೇಡ್ಕರ್ ಮತ್ತು ಸಂವಿಧಾನ ರಚನೆಗೆ ಶ್ರಮಿಸಿದ ಎಲ್ಲಾ ನಾಯಕರನ್ನು ಸ್ಮರಿಸುವ ದಿನವೂ ಹೌದು. ವಿಶ್ವದ ಅತ್ಯಂತ ದೊಡ್ಡ ಲಿಖಿತ ಸಂವಿಧಾನವಾಗಿರುವ ಭಾರತೀಯ ಸಂವಿಧಾನ ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮತ್ತು ಧರ್ಮನಿರಪೇಕ್ಷತೆ ಎಂಬ ಮೌಲ್ಯಗಳ ಮೇಲೆ ನಿರ್ಮಿತವಾಗಿದೆ. ಈ ದಿನ ಶಾಲೆ ಕಾಲೇಜುಗಳಲ್ಲಿ ಪೀಠಿಕೆ ಪಠಣ, ಭಾಷಣ, ಪ್ರಬಂಧ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ ಎಂದು ಅವರು ತಿಳಿಸಿದರು.

ಶಿಕ್ಷಕ ಪಿ. ಮಧು ಹಾಜರಿದ್ದರು.

ಮಧುಮೇಹದ ಬಗ್ಗೆ ಜಾಗೃತಿ ಮೂಡಿಸುವುದು ಅತ್ಯಗತ್ಯ

• ಪ್ರಜೋದಯ ವರದಿ

ಹಾಸನ: ವಿಶ್ವ ಮಧುಮೇಹ ದಿನವನ್ನು ಪ್ರತಿ ವರ್ಷ ನವೆಂಬರ್ 14 ರಂದು ಆಚರಿಸಲಾಗುತ್ತದೆ. ಈ ದಿನದ ಉದ್ದೇಶವು ಮಧುಮೇಹದ ಬಗ್ಗೆ ಜಾಗೃತಿ ಮೂಡಿಸುವುದು, ಅದರ ತಡೆಗಟ್ಟುವಿಕೆ, ರೋಗ ನಿರ್ಣಯ ಮತ್ತು ಅಗತ್ಯ ಚಿಕಿತ್ಸೆಯ ಕುರಿತು ಮಾಹಿತಿ ನೀಡುವುದು, ಮತ್ತು ಮಧುಮೇಹದಿಂದ ಬಳಲುತ್ತಿರುವ ಜನರಿಗೆ ಅರಿವು ಮೂಡಿಸುವುದು ಎಂದು ಹಿರಿಯ ವೈದ್ಯ ಡಾ.ಎ. ನಾಗರಾಜ್ ಅವರು ಹೇಳಿದರು.

ಭಾರತೀಯ ವೈದ್ಯಕೀಯ ಸಂಘ, ಹಾಸನ, ಜನಪ್ರಿಯ ಸಮೂಹ ಸಂಸ್ಥೆಗಳು, ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರ ಸಂಘ, ಮಣಿ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ, ಸಹ್ಯಾದ್ರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಇನ್ನಿತರೆ ಸಂಸ್ಥೆಗಳ ಸಹಯೋಗದಲ್ಲಿ ವಿಶ್ವ ಡಯಾಬಿಟಿಕ್ ದಿನಾಚರಣೆ ಅಂಗವಾಗಿ ಜಾಥಾ ಕಾರ್ಯಕ್ರಮದ ಚಾಲನೆ ನೀಡಿ ಮಾತನಾಡಿದರು.

ಐಎಂಎ ಮಾಜಿ ಅಧ್ಯಕ್ಷರು ಮತ್ತು ಜನಪ್ರಿಯ ಫೌಂಡೇಶನ್ ಅಧ್ಯಕ್ಷ ಡಾ. ವಿ.ಕೆ.ಅಬ್ದುಲ್ ಬಶೀರ್ ಮಾತನಾಡಿ, ಆರೋಗ್ಯದ ಬಗ್ಗೆ ಮಾತನಾಡುತ್ತಾ ನಾವು ನಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ನೀಡಿ, ಬಿಪಿ, ಶುಗರ್‌ನಂತಹ ಸಾಮಾನ್ಯ ಕಾಯಿಲೆಯನ್ನು ನಿರ್ಲಕ್ಷ ಮಾಡಬೇಡಿ ಕಾಲಕಾಲಕ್ಕೆ ಪರೀಕ್ಷೆ ಮಾಡಿಕೊಂಡು ಆರೋಗ್ಯದಿಂದರಬೇಕು, ಬಿಪಿ ಶುಗರ್ ಅನ್ನು ಹತೋಟಿಯಲ್ಲಿ ಇಡಬೇಕೆಂದು ಸಾರ್ವಜನಿಕರಲ್ಲಿ ಕಿವಿಮಾತು ಹೇಳಿದರು.

ಐಎಂಎ ಅಧ್ಯಕ್ಷ ಡಾ. ಶ್ರೀರಂಗ ಮಾತನಾಡಿ, ಮಧುಮೇಹಿಗಳು ಸಂಸ್ಕರಿಸಿದ ಆಹಾರ, ಸಕ್ಕರೆ ಪಾನೀಯಗಳು, ಮತ್ತು ಅತಿಯಾದ ಉಪ್ಪು, ಸಂಸ್ಕರಿಸಿದ ಕಾರ್ಬೋಹೈಡ್ರೇಟ್‌ಗಳು ಮತ್ತು ಅಧಿಕ ಕೊಬ್ಬಿನಾಂಶವಿರುವ ಆಹಾರಗಳನ್ನು ತಿನ್ನಬಾರದು. ಹೆಚ್ಚಿನ ಸಕ್ಕರೆ ಅಂಶವಿರುವ ಹಣ್ಣುಗಳಾದ ಬಾಳೆ ಹಣ್ಣು, ಮಾವು, ದ್ರಾಕ್ಷಿ, ಮತ್ತು ಹಣ್ಣಿನ ರಸಗಳನ್ನು ಕೂಡ ಮಿತಗೊಳಿಸಬೇಕು ಮತ್ತು ಪಾಲಕ್, ಹಾಗಲಕಾಯಿ, ಬ್ರೊಕೊಲಿ, ಹೂಕೋಸು, ಕ್ಯಾರೆಟ್ ಪಿಷ್ಟರಹಿತ ತರಕಾರಿಗಳನ್ನು ಹೆಚ್ಚು ಸೇವಿಸಿ ರಾಗಿ, ಬ್ರೌನ್ ರೈಸ್, ಕ್ವಿನೋವಾ, ಮತ್ತು ಓಟ್ಸ್‌ನಂತಹ ಸಂಪೂರ್ಣ ಧಾನ್ಯಗಳನ್ನು ಮತ್ತು ತಾಜಾ ಹಣ್ಣುಗಳು, ವಿಶೇಷವಾಗಿ ಕಡಿಮೆ ಸಕ್ಕರೆಯ ಹಣ್ಣುಗಳಾದ ದ್ರಾಕ್ಷಿಹಣ್ಣು ಆಮ್ಲಾ, ಮತ್ತು ಕಾಲಾ ಜಾಮೂನ್‌ಗಳನ್ನು ಸೇವಿಸಬಹುದು ಎಂದು ಮಾಹಿತಿ ನೀಡಿದರು.

ಮಣಿ ಆಸ್ಪತ್ರೆ ಮುಖ್ಯಸ್ಥ ಡಾ. ಯತೀಶ್‌ಕುಮಾರ್, ಡಾ.ರಾಜಶೇಖರ್, ಡಾ.ಪದ್ಮಪ್ರಸಾದ್, ಡಾ. ಕಿರಣ್, ಡಾ. ಭಾರತಿ ರಾಜಶೇಖರ್, ಡಾ.ನ್ಯಾನ್ಸಿಪೌಲ್, ಡಾ.ತೇಜಸ್ವಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಡಿ.12 ರವರೆವಿಗೂ ಶೇ.50 ರಷ್ಟು ದಂಡ ಪಾವತಿಸಲು ಅವಕಾಶ

• ಪ್ರಜೋದಯ ವರದಿ

ಹಾಸನ: ರಾಜ್ಯ ಸರ್ಕಾರದ ಆದೇಶದ ಮೇರೆಗೆ, ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು ರವರು 1991-1992 ರಿಂದ 2019-2020 ರ ಸಾಲಿನಲ್ಲಿ ದಾಖಲಾಗಿ, ದಂಡ ಪಾವತಿಗೆ ಬಾಕಿ ಇರುವ ಪ್ರಕರಣಗಳಿಗೆ ಶೇ.50 ರಷ್ಟು ರಿಯಾಯಿತಿ ದರದಲ್ಲಿ ದಂಡವನ್ನು ಪಾವತಿಸಲು ಡಿ.12 ರವರೆಗೆ ಅವಕಾಶ ನೀಡಲಾಗಿದೆ.

ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಮಹಮ್ಮದ್ ಸುಜೀತಾ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುನಿಗನಹಳ್ಳಿ ಗ್ರಾ.ಪಂ. ಅಧ್ಯಕ್ಷೆಯಾಗಿ ತಾರಾ ಆಯ್ಕೆ

• ಪ್ರಜೋದಯ ವರದಿ

ಸಕಲೇಶಪುರ: ತಾಲ್ಲೂಕಿನ ಕುನಿಗನಹಳ್ಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಜೆಡಿಎಸ್, ಕಾಂಗ್ರೆಸ್ ಹಾಗೂ ಬಿಜೆಪಿ ಮೂರು ಪಕ್ಷಗಳ ಸದಸ್ಯರ ಬೆಂಬಲದಿಂದ ವಡೂರು ಗ್ರಾಮದ ಬಿ.ಇ.ತ

ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್‌ಗೆ ಕೇಂದ್ರದ ಒಲವು

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರಯತ್ನದ ಫಲ | 9 ಜಿಲ್ಲೆಗಳಿಗೆ ಅನುಕೂಲ

• ಪ್ರಜೋದಯ ವರದಿ

ನವದೆಹಲಿ: ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಂದ ಪ್ರಸ್ತಾಪಿತ ಕರ್ನಾಟಕದ 9 ಜಿಲ್ಲೆಗಳನ್ನು ಒಳಗೊಂಡ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಕಾರ್ಯಕ್ರಮ (C – rgrl l s rpg mppg mp C t mn l r pmep)ಕ್ಕೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ. ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಒಂಬತ್ತು ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ಪತ್ರ ಬರೆದಿದ್ದಾರೆ.

2025ರ ನ.13ರಂದು ಪಿಯೂಷ್ ಗೋಯಲ್ ಅವರನ್ನು ಭೇಟಿಯಾಗಿದ್ದ ಸಚಿವ ಕುಮಾರಸ್ವಾಮಿ ಅವರು ಮಂಡ್ಯ, ಮೈಸೂರು, ಚಾಮರಾಜನಗರ, ಕೋಲಾರ, ಹಾಸನ, ಮಂಗಳೂರು, ಹುಬ್ಬಳ್ಳಿ-ಧಾರವಾಡ, ರಾಯ ಚೂರು ಮತ್ತು ಬೀದರ್ ಜಿಲ್ಲೆಗಳನ್ನು ಒಳಗೊಂಡ ವಿಶಾಲವಾದ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಕಾರ್ಯಕ್ರಮ ಅನುಷ್ಠಾನ ಮಾಡಬೇಕೆಂದು ಕೋರಿ ಮನವಿ ಸಲ್ಲಿಸಿ ಮಾತುಕತೆ ನಡೆಸಿದ್ದರು.

ಕುಮಾರಸ್ವಾಮಿ ಅವರ ಪ್ರಸ್ತಾವನೆಯನ್ನು ರಾಜ್ಯದ ಅಭಿವೃದ್ಧಿಗೆ ಪರಿವರ್ತನಾತ್ಮಕ ಪರಿಕಲ್ಪನೆ ಎಂದು ಶ್ಲಾಘಿಸಿದ್ದ ಗೋಯೆಲ್, ಕರ್ನಾಟಕದ ಪ್ರಾದೇಶಿಕ ಸಮತೋಲಿತ ಕೈಗಾರಿಕಾ ಅಭಿವೃದ್ಧಿಗೆ ಇದು ಪೂರಕವಾಗಿದೆ. ಇಂಥಹ ಆಕಾಂಕ್ಷೆಗಳನ್ನು ಈಡೇರಿಸುವ ರಚನಾತ್ಮಕ ಕೇಂದ್ರ ನೀತಿಯನ್ನು ಕಾರ್ಯರೂಪಕ್ಕೆ ತರುವಲ್ಲಿ ಈ ಕ್ರಮವು ಪ್ರಮುಖ ಆರಂಭಿಕ ಹೆಜ್ಜೆಯಾಗಿದೆ ಯೆಂದು ಸಚಿವ ಗೋಯೆಲ್ ತಿಳಿಸಿದ್ದಾರೆ.

ಕೈಗಾರಿಕೆ ಕ್ಷೇತ್ರದಲ್ಲಿ ಮುಂಚೂಣಿ ರಾಜ್ಯವಾಗಿರುವ ಕರ್ನಾಟಕದಾದ್ಯಂತ ಸೂಕ್ತ ಕೈಗಾರಿಕಾ ಕಾರಿಡಾರ್ ಯೋಜನೆಯ ಚೌಕಟ್ಟಿನಡಿಯಲ್ಲಿ ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸುವ ಕುರಿತಂತೆ ಗೋಯೆಲ್ ಅವರನ್ನು ಕುಮಾರಸ್ವಾಮಿ ಮನವೊಲಿಸಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರ ದೃಢ ಸಂಕಲ್ಪದಂತೆ ಪ್ರಾದೇಶಿಕ ಕೈಗಾರಿಕಾ ಬೆಳವಣಿಗೆಯನ್ನು ಬಲಪಡಿಸಿ ಉತ್ತೇಜಿಸಲು, ಸಾಗಾಣಿಕೆಯ ಸೌಕರ್ಯವನ್ನು ಅಧಿಕವಾಗಿ ಅಭಿವೃದ್ಧಿಪಡಿಸಲು ಹಾಗು ಕರ್ನಾಟಕದ ಉದ್ದಗಲಕ್ಕೂ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶ ಸೃಷ್ಟಿಸಲು ಈ ಯೋಜನೆಯು ಬಹುದೊಡ್ಡ ಮಟ್ಟದಲ್ಲಿ ಕೊಡುಗೆ ನೀಡುತ್ತದೆಂಬ ಅಂಶವನ್ನು ಸಚಿವ ಗೋಯಲ್ ಅವರ ಜೊತೆ ಕುಮಾರಸ್ವಾಮಿ ಚರ್ಚಿಸಿದ್ದರು.

ಈ ಯೋಜನೆ ಅನುಷ್ಠಾನಕ್ಕೆ ಬಂದರೆ ಕರ್ನಾಟಕದಲ್ಲಿ ಸರಕು, ಕೈಗಾರಿಕೆ ಉತ್ಪನ್ನಗಳ ಸಾಗಣೆ ಸುಲಭವಾಗಿ ಕೈಗಾರಿಕಾಭಿವೃದ್ಧಿ ವೇಗಗತಿಯಲ್ಲಿ ಸಾಗುತ್ತದೆ. ಉದ್ದೇಶಿತ ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಗೊಂಡರೆ ಅನುಕೂಲವಾಗುತ್ತದೆ. ಈ ಪ್ರಸ್ತಾವಿತ ಕೈಗಾರಿಕಾ ಪಾರ್ಕ್‌ಗಳನ್ನು ಸೂಕ್ತವಾದ ಕೈಗಾರಿಕಾ ಕಾರಿಡಾರ್ ಇಲ್ಲವೇ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಕಾರ್ಯಕ್ರಮ ಚೌಕಟ್ಟಿನಡಿಯಲ್ಲಿ ಪರಿಗಣಿಸಬೇಕೆಂದು ವಿನಂತಿಸಿದ ಕುಮಾರಸ್ವಾಮಿ, ಈ ಜಿಲ್ಲೆಗಳನ್ನು ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್‌ಗಳಿಗೆ ಸಂಯೋಜಿಸುವ ಮೂಲಕ ಕರ್ನಾಟಕವು ಉದ್ಯೋಗ ಸೃಷ್ಟಿಯಲ್ಲಿ ನಿರ್ಣಾಯಕ ಪಾತ್ರ ವಹಿಸಲು ಅನುಕೂಲವಾಗುತ್ತದೆ. ಸಾಕಾಣಿಗೆ ಸುಲಭವಾಗಿ ಖಾಸಗಿ ಬಂಡವಾಳ ಹೂಡಿಕೆಯಲ್ಲೂ ಗಮನಾರ್ಹ ಪ್ರಗತಿ ಸಾಧಿಸಲಿದೆ ಎಂದರು.

> **ಸಚಿವ ಪಿಯೂಷ್ ಗೋಯಲ್ ಅವರು ಈ ಪ್ರಸ್ತಾವನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿ ದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತ ಸಾಕಾರಕ್ಕೆ ಈ ಯೋಜನೆ ಪೂರಕ ವಾಗಿದೆ. ಉತ್ಪಾದನೆ ಮತ್ತು ಕೈಗಾರಿಕಾ ಸ್ಪರ್ಧಾತ್ಮಕತೆಯನ್ನು ಬಲಪಡಿಸುವ ಕೇಂದ್ರ ಸರ್ಕಾರದ ವಿಶಾಲ ದೃಷ್ಟಿಕೋನಕ್ಕೆ ಅನುಗುಣವಾಗಿ ಈ ಉಪಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ಕೈಗೆತ್ತಿ ಕೊಳ್ಳಲಾಗುತ್ತಿದೆ.**
> **-ಹೆಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

ಸಮಾನ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿ

ಪ್ರಸ್ತಾವಿತ ಈ ಕೈಗಾರಿಕಾ ಪಾರ್ಕುಗಳು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸುವ, ಪ್ರಾದೇಶಿಕ ಪೂರೈಕೆ ಸರಪಳಿಯ ಸಂಪರ್ಕಗಳನ್ನು ಮತ್ತಷ್ಟು ಬಲಪಡಿಸುವ ಹಾಗು ಹುಬ್ಬಳ್ಳಿ- ಧಾರವಾಡ ಮತ್ತು ಮಂಗಳೂರಿನಲ್ಲಿ ಸಾಗಣೆ ಮತ್ತು ಉತ್ಪಾದನೆಯಿಂದ ಮೊದಲುಗೊಂಡು ರಾಯಚೂರಿನಲ್ಲಿ ಕೃಷಿ ಸಂಸ್ಕರಣೆ, ಮೈಸೂರು ಮತ್ತು ಕೋಲಾರದಲ್ಲಿ ಮೌಲ್ಯವರ್ಧಿತ ವಲಯಗಳ ವಿಸ್ತರಣೆವರೆಗೆ ವಿಶೇಷ ಕೈಗಾರಿಕಾ ಸಮೂಹಗಳನ್ನು ಉತ್ತೇಜಿಸುತ್ತವೆ.



ಹಾಸನದ ಕನಕ ಭವನದಲ್ಲಿ ಬುಧವಾರ ಜಿಲ್ಲಾ ಮತ್ತು ತಾಲ್ಲೂಕು ಕುರುಬರ ಸಂಘದಿಂದ ಹುಡಾ ಅಧ್ಯಕ್ಷರಾಗಿ ಆಯ್ಕೆಯಾದ ಪಟೇಲ್ ಶಿವಪ್ಪ ಅವರಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಕಾಗಿನೆಲೆ ಕನಕ ಗುರು ಪೀಠದ ಶ್ರೀ ಶಿವಾನಂದ ಪುರಿ ಸ್ವಾಮೀಜಿ, ಸಂಸದ ಶ್ರೇಯಸ್ ಪಟೇಲ್, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಕುರುಬರ ಸಂಘದ ಜಿಲ್ಲಾಧ್ಯಕ್ಷ ಸಿದ್ದೇಗೌಡ ರಾಜಘಟ್ಟ ಮತ್ತಿತರರಿದ್ದರು.

ಜಿಲ್ಲಾದ್ಯಂತ ಷಷ್ಠಿ ಹಬ್ಬ ಆಚರಣೆ



• ಪ್ರಜೋದಯ ವರದಿ

ಹಾಸನ: ನಗರ ಸೇರಿ ಜಿಲ್ಲಾದ್ಯಂತ ಬುಧವಾರ ಷಷ್ಠಿ ಹಬ್ಬವನ್ನು ಅರ್ಥ ಪೂರ್ಣವಾಗಿ ಆಚರಿಸಲಾಯಿತು.

ಹೇಮಾವತಿ ನಗರದಲ್ಲಿರುವ ಶ್ರೀ ಸುಬ್ರಮಣ್ಯ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆ ಪುನಸ್ಕಾರ ನೆರವೇರಿದವು. ಶಾಸಕ ಹೆಚ್.ಪಿ.ಸ್ವರೂಪ್ ಸೇರಿ ಅನೇಕರು ಭಾಗವಹಿಸಿದ್ದರು.

ದೇವಸ್ಥಾನ ಟ್ರಸ್ಟ್ ಕಾರ್ಯದರ್ಶಿ ಗೋವಿಂದರಾಜು ಅವರು ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಸ್ಕಂದ ಷಷ್ಠಿ ಹಬ್ಬವನ್ನು ನೆರವೇರಿಸಲಾಗಿದೆ. ಸುಬ್ರಮಣ್ಯ ದೇವರ ದರ್ಶನಕ್ಕೆ ಸಾವಿರಾರು ಭಕ್ತರು ಆಗಮಿಸಿದ್ದಾರೆ. ಎಲ್ಲಾ ಸಂಕಷ್ಟವನ್ನು ದೂರ ಮಾಡಿ ಒಳ್ಳೆಯ ವಾತಾವರಣ ನಿರ್ಮಿಸಲಿ ಎಂದು ದೇವರಲ್ಲಿ ಪ್ರಾರ್ಥಿಸಲಾಗಿದೆಯೆಂದರು.

ಟ್ರಸ್ಟ್ ಅಧ್ಯಕ್ಷ ಸರ್ವನಂದ್, ಶಿವಲಿಂಗಂ, ಆನಂದ್ ರಾಜು, ಮುತ್ತುಕುಮಾರ್, ಮಣಿಕಂಠ ಇತರರಿದ್ದರು.

ಶಾಸಕ ಶಿವಲಿಂಗೇಗೌಡರು ಸಿದ್ದರಾಮಯ್ಯಗೆ ಬೆಂಬಲ ಸೂಚಿಸಲಿ

» ಮೊದಲನೇ ಪುಟದಿಂದ

ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಂಗೆಮಡಿಗೆ 10 ಕೋ.ರೂ. ಅನುದಾನ ನೀಡಿ 4 ಕೋ.ರೂ. ಬಿಡುಗಡೆ ಮಾಡಿದ್ದರು. ಆದರೆ, ಯಾವ ಕಾಮಗಾರಿಯೂ ಆಗದ ಹಿನ್ನಲೆಯಲ್ಲಿ ಸ್ವಾಮೀಜಿ ಸಾರ್ವಜನಿಕ ವೇದಿಕೆಯಲ್ಲಿ ಪ್ರಶ್ನಿಸಿದ್ದರು. ಅದಕ್ಕೆ ಸಿಟ್ಟಾದ ಶಾಸಕರು, ವೇದಿಕೆಯಲ್ಲೇ ಸ್ವಾಮೀಜಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಅಪಮಾನ ಮಾಡಿದ್ದಾರೆಂದು ದೂರಿದರು.

ಕೆ.ಎಂ.ಶಿವಲಿಂಗೇಗೌಡರು ಕೇವಲ ಭಾಷಣಕ್ಕಷ್ಟೇ ಸೀಮಿತ ವ್ಯಕ್ತಿ. ಯಾವ ಹಳ್ಳಿಯಲ್ಲೂ ಅಭಿವೃದ್ಧಿ ಕೆಲಸಗಳಾಗಿಲ್ಲ. ಗಂಗಾ ಕಲ್ಯಾಣ ಯೋಜನೆಯಡಿ ಅವ್ಯಾಹತ ಭ್ರಷ್ಟಾಚಾರ ನಡೆದಿದ್ದು, ಶಾಸಕರ ವೈಫಲ್ಯ ಎದ್ದು ಕಾಣುತ್ತಿದೆ. ಸ್ವಾಮೀಜಿ ಅವರನ್ನು ನಿಂದಿಸಿದ್ದಕ್ಕೆ ಕ್ಷಮೆ ಕೇಳದಿದ್ದರೆ ಮುಂದಿನ ಚುನಾವಣೆಯಲ್ಲಿ ಸಮುದಾಯದ ಶಕ್ತಿ ತೋರಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

ಮಕ್ಕಳಿಗೆ ಸಂವಿಧಾನ ಪೀಠಿಕೆ ಓದಿಸಿ : ಶ್ರೇಯಸ್ ಪಟೇಲ್

» ಮೊದಲನೇ ಪುಟದಿಂದ

ಕೆಲಸ ಮಾಡಿದರೂ ನಮ್ಮ ಸಂವಿಧಾನವನ್ನು ಮರೆಯಬಾರದು. ಎಲ್ಲಾ ರೀತಿಯ ರಂಗದವರಿಗೂ ಮೀಸಲಾತಿ ಸಿಕ್ಕಿದೆ ಎಂದರೆ, ಅದು ಸಂವಿಧಾನದಿಂದ ಇಂದು ಮೀಸಲಾತಿಯಿಂದ ನಾವುಗಳು ಉತ್ತಮ ಸ್ಥಾನದಲ್ಲಿದ್ದೇವೆ. ಹಾಗಾಗಿ ಸಂವಿಧಾನದ ಬಗ್ಗೆ ಶಾಲೆಗಳಲ್ಲಿ ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಸಂವಿಧಾನದ ಕುರಿತು ಅರಿವು ಮೂಡಿಸಬೇಕು ಎಂದರು.

ಉಪನ್ಯಾಸಕರಾಗಿ ಆಗಮಿಸಿ ಮಾತನಾಡಿದ ಗಿರೀಶ್ ಅವರು, ದೇಶದ ಎಲ್ಲಾ ಕಾನೂನುಗಳನ್ನು ರೂಪಿಸುವ ಆಕರ ಗ್ರಂಥ ಸಂವಿಧಾನವಾಗಿದೆ. ನಮ್ಮ ಭಾರತ ದೇಶದ ಆತ್ಮ ಈ ಸಂವಿಧಾನವಾಗಿದೆ. ಇದನ್ನು 68 ದೇಶಗಳ ಸಂವಿಧಾನವನ್ನು 22 ಸಮಿತಿಗಳು ಪರಿಪೂರ್ಣವಾಗಿ ಅಧ್ಯಯನ ಮಾಡಿ ಪ್ರತಿ ಪದವನ್ನು ಅರ್ಥೈಸಿ ಜೋಡಿಸಿ ಅಡಿ ಟಿಪ್ಪಣಿ ಹಾಕಿ ಅಂಬೇಡ್ಕರ್ ರವರು ರಚಿಸಿದ್ದಾರೆಂದು ತಿಳಿಸಿದರು.

ಪ್ರೇಮ್ ಬಿಹಾರಿ ನಾರಾಯಣ್ ಅವರಿಂದ ಹಿಂದಿ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಸತತ ಆರು ತಿಂಗಳ ಕಾಲ ಸಂವಿಧಾನದ ಪ್ರತಿಗಳನ್ನು ಅಂಬೇಡ್ಕರ್ ಅವರು ಬರೆಸಿದ್ದಾರೆ. ಮೂಲ ಸಂವಿಧಾನದ ಪ್ರತಿಯನ್ನು ಪ್ರಸ್ತುತ ಸಂಸತ್ ಗ್ರಂಥಾಲಯದಲ್ಲಿ ಇಡಲಾಗಿದೆ. ಇದರಲ್ಲಿ ಮೂಲ 395 ವಿಧಿಗಳನ್ನು ನೋಡಬಹುದು. ಈ ಪುಸ್ತಕ 300 ಪುಟ ಹೊಂದಿದೆ ಹಾಗಾಗಿ

ನಮ್ಮ ಸಂವಿಧಾನವನ್ನು ಆನೆಗಾತ್ರದ ಸಂವಿಧಾನ ಎಂದು ಕೂಡ ಕರೆಯಲಾಗುತ್ತದೆ ಎಂದರು.

ಅಭಿಪ್ರಾಯಗಳು ಬದಲಾದಂತೆ ಅಗತ್ಯಕ್ಕೆ ಅನುಗುಣವಾಗಿ ನಮ್ಮ ಸಂವಿಧಾನ ತಿದ್ದುಪಡಿ ಮಾಡಿಕೊಳ್ಳಲು ಅವಕಾಶವಿದೆ. 1,45,000 ಪದಗಳು ನಮ್ಮ ಸಂವಿಧಾನದಲ್ಲಿವೆ. ಸಂವಿಧಾನವನ್ನು ಕೇವಲ ಭಾಷಣದ ಮೂಲಕ ಅಷ್ಟೇ ಅಲ್ಲದೆ ಸಂಗೀತದ ಮೂಲಕವೂ ಕೂಡ ನಾವು ಕೊಂಡಯ್ಯಬಹುದು. ಈ ನಿಟ್ಟಿನಲ್ಲಿ ಸಂವಿಧಾನದಲ್ಲಿರುವ ಹಕ್ಕುಗಳ ಕುರಿತು ಎಲ್ಲರೂ ಮುಂದಿನ ಪೀಳಿಗೆಗೆ ತಿಳಿಸಬೇಕು ಎಂದರು.

ಭಾರತದ ಸಾಂಸ್ಕೃತಿಕ ಪರಂಪರೆಗೆ, ಈ ಮಣ್ಣಿಗೆ ಏನೇನು ಕೊಡಬೇಕು ಎಲ್ಲವನ್ನು ತಿಳಿದು ಅಂಬೇಡ್ಕರ್ ಅವರು ಸಂವಿಧಾನವನ್ನು ರಚಿಸಿದ್ದಾರೆ. ಅಂಬೇಡ್ಕರ್ ಅವರು ವಿಶ್ವದ ತಜ್ಞ, ಮೇಧಾವಿ, ಪಂಡಿತ ಎಂದು ಆಫ್ರಿಕಾ ದೇಶದಲ್ಲಿ ಹೊಗಳಲಾಗಿದೆ. ಇವರು ಸರ್ವ ಸ್ಪರ್ಶಿಯಾಗಿದ್ದಾರೆಂದು ತಿಳಿಸಿದರು.

ಅಂಬೇಡ್ಕರ್ ಅವರ ಸಮಿತಿಯಲ್ಲಿ ಇದ್ದಂತಹ ಎಲ್ಲರನ್ನೂ ಕೂಡ ನಾವು ಸ್ಮರಿಸಿಕೊಳ್ಳಬೇಕು ಎಂದು ಸಂವಿಧಾನದ ಮಹತ್ವದ ಕುರಿತು ಅದರ ಇತಿಹಾಸದ ಕುರಿತು ಸವಿವರವಾಗಿ ಉಪನ್ಯಾಸ ನೀಡಿದರು. ಪ್ರಾರಂಭದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಅವರು ಸಂವಿಧಾನದ ಪೀಠಿಕೆಯನ್ನು ಎಲ್ಲರಿಗೂ ಬೋಧಿಸಿದರು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ದೂದ್ ಪೀರ್ ಮತ್ತಿತರರು ಉಪಸ್ಥಿತರಿದ್ದರು.

ಮೆರವಣಿಗೆಗೆ ಚಾಲನೆ

ಸಂವಿಧಾನ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬುಧವಾರ ಶಾಸಕ ಹೆಚ್.ಪಿ.ಸ್ವರೂಪ್ ಅವರು ಚಾಲನೆ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ರಚಿಸಿರುವ ಭಾರತದ ಸಂವಿಧಾನದಂತೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಮೌಲ್ಯ, ಸಿದ್ಧಾಂತ, ತತ್ವಗಳನ್ನು ನಾವೆಲ್ಲರೂ ಪಾಲಿಸುವ ಮೂಲಕ ಸಂವಿಧಾನ ದಿನಾಚರಣೆಯನ್ನು ಯಶಸ್ವಿಗೊಳಿಸೋಣವೆಂದು ತಿಳಿಸುತ್ತಾ ಶುಭಾಶಯ ಕೋರಿದರು.

ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಮಾತನಾಡಿ, ಭಾರತದ ಪ್ರಜೆಗಳಾದ ನಾವು ನಮ್ಮ ಸಂವಿಧಾನವನ್ನು 1949 ರಲ್ಲಿ ನಮಗೆ ನಾವೇ ಅರ್ಪಿಸಿಕೊಂಡ ದಿನವನ್ನು ಇಂದು ನಾವೆಲ್ಲರೂ ಬಹಳ ಸಂಭ್ರಮದಿಂದ ಆಚರಿಸುತ್ತಿದ್ದೇವೆಂದು ಎಲ್ಲರಿಗೂ ಸಂವಿಧಾನ ದಿನದ ಶುಭಾಶಯಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೇತಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ದೂದ್ ಪೀರ್, ತಹಶೀಲ್ದಾರ್ ಗೀತಾ, ಸಮುದಾಯದ ಮುಖಂಡರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮುಖ್ಯಮಂತ್ರಿ ಕಾರ್ಯಕ್ರಮ ಯಶಸ್ವಿಗೆ ಸೂಚನೆ

» ಮೊದಲನೇ ಪುಟದಿಂದ

ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅವರಿಗೆ ಪ್ರಾಥಮಿಕ ಚಿಕಿತ್ಸೆಗೆ ಅಗತ್ಯ ಸಿದ್ಧತೆಗೆ ಕ್ರಮವಹಿಸಲು ಸೂಚಿಸಿದರು.

ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ, ವ್ಯವಸ್ಥಿತವಾಗಿ ಕಸದ ಬುಟ್ಟಿಗಳನ್ನು ಇಡಬೇಕು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವ ಜೊತೆಗೆ ಕಸದ ಉತ್ಪಾದನೆ ಕಡಿಮೆ ಮಾಡಲು ಕೂಡ ಗಮನಹರಿಸಿ ಪರಿಸರ ಸ್ನೇಹಿ ಕಾರ್ಯಕ್ರಮ ಮಾಡಲು ಸಹಕರಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರನ್ನು ಸ್ವಾಗತಿಸುವ ಹಂತದಿಂದ ಅವರನ್ನು ಬೀಳ್ಕೊಡುವವರೆಗೆ ಪ್ರತಿ ಹಂತದಲ್ಲೂ ವಿಡಿಯೋ ಮತ್ತು ಛಾಯಾಚಿತ್ರ ತೆಗೆಯಲು ಒಂದು ತಂಡ ನೇಮಿಸಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಾರ್ಯಕ್ರಮಕ್ಕೆ ಆಗಮಿಸುವ ಫಲಾನುಭವಿಗಳ ಹೆಸರು, ಮೊಬೈಲ್ ನಂಬರ್, ಗ್ರಾಮದ ಹೆಸರಿನೊಂದಿಗೆ ಪಟ್ಟಿ ತಯಾರಿಸಿ ಒಂದು ಬಸ್‌ಗೆ ಒಬ್ಬರು ನೋಡಲ್ ಆಫೀಸರ್ ನೇಮಿಸಿ ಅವರ ಸಂಪರ್ಕ ಸಂಖ್ಯೆ ನೀಡಬೇಕು ವಾಟ್ಸ್‌ಪ್ ಗ್ರೂಪ್ ಮಾಡಬೇಕು. ಬಸ್ ನಂಬರ್ ಮತ್ತು ಚಾಲಕನ ಮೊಬೈಲ್ ನಂಬರ್ ಶೇರ್ ಮಾಡಬೇಕು, ಬಸ್ ಹೊರಟ ತಕ್ಷಣ ಗ್ರೂಪ್‌ಗೆ ಪೋಟೋ ಹಾಕಬೇಕು. ಇಲಾಖೆವಾರು ಸ್ಟಾಲ್ ಹಾಕಲು ಸಿದ್ಧತೆ ಮಾಡಿಕೊಳ್ಳಬೇಕು. ಕಾರ್ಯಕ್ರಮದ ಉದ್ದೇಶ ಮತ್ತು ಮಾಹಿತಿ ನೀಡಲು ಕಿರು ಹೊತ್ತಿಗೆ ಬಿಡುಗಡೆಗೆ ಕ್ರಮವಹಿಸಬೇಕೆಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಅವರು ಮಾತನಾಡಿ, ಗ್ರಾಮೀಣ ಭಾಗದಿಂದ ಬರುವ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಪಿಕ್ ಅಪ್ ಪಾಯಿಂಟ್ ನಿಗದಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಮಂಜುನಾಥ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳಾದ ಬಾಬು, ಕೃಷ್ಣ ಮೂರ್ತಿ,ಉಪ ವಿಭಾಗಾಧಿಕಾರಿಗಳಾದ ಜಗದಿ

ಶ್ರಮ ಶಕ್ತಿ ನೀತಿ-2025ರ ಕರಡು ಪ್ರತಿ ಸುಟ್ಟು ಸಿಐಟಿಯು ಆಕ್ರೋಶ

• ಪ್ರಜೋದಯ ವರದಿ

ಹಾಸನ: ಕೇಂದ್ರ ಸರ್ಕಾರ ರಾಷ್ಟ್ರೀಯ ಕಾರ್ಮಿಕ ಮತ್ತು ಉದ್ಯೋಗ ನೀತಿ ಜಾರಿಗೊಳಿಸಲು ಪ್ರಯತ್ನಿಸುವ ಮೂಲಕ ದುಡಿಯುವ ವರ್ಗವನ್ನು ಸಂಕಷ್ಟಕ್ಕೆ ಸಿಲುಕಿಸುತ್ತಿದ್ದು, ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲವೆಂದು ಸಿಐಟಿಯು ಕಾರ್ಯಕರ್ತರು ಶ್ರಮ ಶಕ್ತಿ ನೀತಿ-2025ರ ಕರಡು ಪ್ರತಿ ಸುಟ್ಟು ಹಾಕಿ ಪ್ರತಿಭಟಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟ